ಸೂ. 123 ರು. 10

11. ಹೂದ್

(ಅವತೀರ್ಣ - ಮಕ್ಕಾದಲ್ಲಿ)

بِسْمِ اللّٰهِ الرَّحْمٰنِ الرَّحِيْمِ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

الٓرٰ قف كِتٰبٌ اُحْكِمَتْ اٰيٰتُهٗ ثُمَّ فُصِّلَتْ مِنْ لَّدُنْ حَكِيْمٍ خَبِيْرٍ ۙ﴿١﴾ اَلَّا تَعْبُدُوْٓا اِلَّا اللّٰهَ ؕ اِنَّنِيْ لَكُمْ مِّنْهُ نَذِيْرٌ وَّبَشِيْرٌ ۙ﴿٢﴾

1-2. ಅಲಿಫ್ ಲಾಮ್ ರಾ, ಇದು ಫರಮಾನು[1] ಇದರ ಸೂಕ್ತಗಳು ಪ್ರಬುದ್ಧ ಮತ್ತು ಕೂಲಂಕಷವಾಗಿದ್ದು ನೀವು ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದು ಓರ್ವ ಧೀಮಂತನೂ ವಿವರಪೂರ್ಣನೂ ಆದವನ ಕಡೆಯಿಂದ ನಿರ್ದೇಶಿಸಲ್ಪಟ್ಟಿದೆ. ನಾನು ಅವನ ಕಡೆಯಿಂದ ನಿಮಗೆ ಎಚ್ಚರಿಕೆ ಕೊಡುವವನೂ ಸುವಾರ್ತೆ ನೀಡುವವನೂ ಆಗಿರುತ್ತೇನೆ.

وَّاَنِ اسْتَغْفِرُوْا رَبَّكُمْ ثُمَّ تُوْبُوْٓا اِلَيْهِ يُمَتِّعْكُمْ مَّتَاعًا حَسَنًا اِلٰٓى اَجَلٍ مُّسَمًّى وَّيُؤْتِ كُلَّ ذِيْ فَضْلٍ فَضْلَهٗ ؕ وَاِنْ تَوَلَّوْا فَاِنِّيْٓ اَخَافُ عَلَيْكُمْ عَذَابَ يَوْمٍ كَبِيْرٍ ﴿٣﴾

3. ನೀವು ನಿಮ್ಮ ಪ್ರಭುವಿನೊಡನೆ ಕ್ಷಮೆ ಯಾಚಿಸಿ ಅವನಿಗೆ ಶರಣು ಹೋಗಿರಿ. ಅವನು ಒಂದು ನಿಶ್ಚಿತ ಕಾಲಾವಧಿಯ ವರೆಗೆ ನಿಮಗೆ ಉತ್ತಮ ಜೀವನಾಧಾರಗಳನ್ನು ನೀಡುವನು[2] ಮತ್ತು ಪ್ರತಿಯೊಬ್ಬ ಅನುಗ್ರಹೀತನಿಗೆ ತನ್ನ ಅನುಗ್ರಹವನ್ನು ಪ್ರದಾನ ಮಾಡುವನು.[3] ಆದರೆ ನೀವು ವಿಮುಖರಾದರೆ ನಿಮ್ಮ ಪಾಲಿಗೆ ಒಂದು ಮಹಾ ದಿನದಂದು ಬರುವ ಯಾತನೆಯ ಬಗ್ಗೆ ನಾನು ಭಯಪಡುತ್ತೇನೆ.

---

1. ವಿವರಣಾ ಶೈಲಿಗೆ ಅನುಗುಣವಾಗಿ ಇಲ್ಲಿ 'ಕಿತಾಬ್' ಎಂಬ ಪದವನ್ನು 'ಫರಮಾನು' ಎಂದು ಭಾಷಾಂತರಿಸಲಾಗಿದೆ. ಅರಬಿ ಭಾಷೆಯಲ್ಲಿ ಈ ಶಬ್ದ ಗ್ರಂಥ ಅಥವಾ ಪುಸ್ತಕ ಎಂಬರ್ಥದಲ್ಲಿ ಮಾತ್ರವಲ್ಲ- ಅಪ್ಪಣೆ, ರಾಜಾಜ್ಞೆ ಎಂಬರ್ಥದಲ್ಲೂ ಪ್ರಯೋಗಿಸಲ್ಪಡುತ್ತದೆ. ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ಈ ಶಬ್ದ ಇದೇ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ.
2. ಅರ್ಥಾತ್- ಲೋಕದಲ್ಲಿರಲು ನಿಮಗೆ ನಿಗದಿಪಡಿಸಲಾಗಿರುವ ಅವಧಿಯಲ್ಲಿ ಅವನು ನಿಮ್ಮನ್ನು ಕೆಟ್ಟ ಸ್ಥಿತಿಯಲ್ಲಲ್ಲ, ಉತ್ತಮ ಸ್ಥಿತಿಯಲ್ಲಿರಿಸುವನು. ನಿಮ್ಮ ಮೇಲೆ ಅವನ ಅನುಗ್ರಹಗಳು ವರ್ಷಿಸುವುದು. ಅವನು ದಯಪಾಲಿಸುವ ಸಮೃದ್ಧಿಯನ್ನು ನೀವು ಆಸ್ವದಿಸುವಿರಿ. ನೀವು ಸುಭಿಕ್ಷೆ ಮತ್ತು ನೆಮ್ಮದಿಯಿಂದಿರುವಿರಿ. ಜೀವನದಲ್ಲಿ ಶಾಂತಿ ಸಮಾಧಾನ ನಿಮಗೆ ಪ್ರಾಪ್ತವಾಗುವುದು. ನಿಮಗೆ ನಿಂದ್ಯತೆ ಮತ್ತು ಅವಮಾನದ ಬದಲು ಗೌರವಾಭಿಮಾನದ ಬದುಕು ಸಿಗುವುದು.
3. ಅರ್ಥಾತ್- ಚಾರಿತ್ರ್ಯ ಮತ್ತು ಸತ್ಕರ್ಮದಲ್ಲಿ ಯಾರು ಎಷ್ಟು ಮುಂದುವರಿಯುವರೋ ಅವರಿಗೆ ಅಷ್ಟೇ ಉನ್ನತವಾದ ಸ್ಥಾನಮಾನ ದೊರೆಯುವುದು. ತನ್ನ ಚಾರಿತ್ರ್ಯ ಮತ್ತು ನಡವಳಿಕೆಯ ಮೂಲಕ ಅವನು ತನ್ನನ್ನು ಯಾವ ಸೌಭಾಗ್ಯಕ್ಕೆ ಅರ್ಹನಾಗಿ ಮಾಡುವನೋ ಆ ಸೌಭಾಗ್ಯ ಅವನಿಗೆ ದೊರೆತೇ ತೀರುವುದು.

4. ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಲಿಕ್ಕಿದೆ. ಅವನು ಸರ್ವ ಸಮರ್ಥನು.

إِلَى اللَّهِ مَرْجِعُكُمْ ۖ وَهُوَ عَلَىٰ كُلِّ شَيْءٍ قَدِيرٌ ④

5. ನೋಡಿರಿ, ಇವರು ಅವನಿಂದ ಅಡಗಿಸಿಕೊಳ್ಳಲಿಕ್ಕಾಗಿ ತಮ್ಮ ಹೃದಯಗಳನ್ನು ಮುದುಡಿ ಕೊಳ್ಳುತ್ತಾರೆ.[4] ಜಾಗ್ರತೆ! ಇವರು ತಮ್ಮನ್ನು ತಾವು ಬಟ್ಟೆಗಳಿಂದ ಮುಚ್ಚಿಕೊಂಡಾಗ ಅಲ್ಲಾಹನು ಇವರ ಅಂತರಂಗವನ್ನೂ ಬಹಿರಂಗವನ್ನೂ ತಿಳಿಯುತ್ತಾನೆ. ಅವನಂತು ಇವರ ಹೃದಯ ರಹಸ್ಯಗಳನ್ನೂ ಬಲ್ಲನು.

أَلَا إِنَّهُمْ يَثْنُونَ صُدُورَهُمْ لِيَسْتَخْفُوا
مِنْهُ ۚ أَلَا حِينَ يَسْتَغْشُونَ ثِيَابَهُمْ
يَعْلَمُ مَا يُسِرُّونَ وَمَا يُعْلِنُونَ ۚ إِنَّهُ
عَلِيمٌ بِذَاتِ الصُّدُورِ ⑤

6. *ಭೂಮಿಯಲ್ಲಿ ಚಲಿಸುವ ಯಾವ ಸಜೀವಿಯ ಜೀವನಾಧಾರವೂ ಅಲ್ಲಾಹನ ಹೊಣೆಯಲ್ಲಿಲ್ಲದೆ ಇಲ್ಲ. ಅದು ಎಲ್ಲಿ ವಾಸಿಸುತ್ತದೆ ಮತ್ತು ಎಲ್ಲಿ ಒಪ್ಪಿಸಲ್ಪಡುತ್ತದೆ ಎಂಬುದು ಅವನಿಗೆ ತಿಳಿಯದೆ ಇಲ್ಲ. ಎಲ್ಲವೂ ಒಂದು ಸುಸ್ಪಷ್ಟ ಗ್ರಂಥದಲ್ಲಿ ಲಿಖಿತಗೊಂಡಿದೆ.

وَمَا مِنْ دَابَّةٍ فِي الْأَرْضِ إِلَّا عَلَى اللَّهِ
رِزْقُهَا وَيَعْلَمُ مُسْتَقَرَّهَا وَمُسْتَوْدَعَهَا ۚ
كُلٌّ فِي كِتَابٍ مُبِينٍ ⑥

7. ನಿಮ್ಮಲ್ಲಿ ಸತ್ಕರ್ಮವೆಸಗುವವನಾರೆಂದು ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ[5] ಭೂಮಿ ಮತ್ತು ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನೇ. - ಅದಕ್ಕಿಂತ ಮುಂಚೆ ಅವನ (ಅರ್ಶ್) ವಿಶ್ವಸಿಂಹಾಸನ ಅರ್ಥಾತ್ ಆಧಿಪತ್ಯವು ನೀರಿನ ಮೇಲಿತ್ತು.[6] ಓ ಪೈಗಂಬರರೇ, ಮರಣಾನಂತರ ನೀವು ಇನ್ನೊಮ್ಮೆ ಎಬ್ಬಿಸಲ್ಪಡುವಿರೆಂದು ಅವರೊಡನೆ ಹೇಳಿದಾಗ ಸತ್ಯನಿಷೇಧಿಗಳು, "ಇದಂತು ಸುಸ್ಪಷ್ಟ ಮಾಟಗಾರಿಕೆ" ಎಂದು ಥಟ್ಟನೆ ಹೇಳಿಬಿಡುತ್ತಾರೆ.[7]

وَهُوَ الَّذِي خَلَقَ السَّمَاوَاتِ وَالْأَرْضَ فِي
سِتَّةِ أَيَّامٍ وَكَانَ عَرْشُهُ عَلَى الْمَاءِ
لِيَبْلُوَكُمْ أَيُّكُمْ أَحْسَنُ عَمَلًا ۗ وَلَئِنْ قُلْتَ إِنَّكُمْ
مَبْعُوثُونَ مِنْ بَعْدِ الْمَوْتِ لَيَقُولَنَّ الَّذِينَ
كَفَرُوا إِنْ هَٰذَا إِلَّا سِحْرٌ مُبِينٌ ⑦

8. ನಾವು ಅವರ ಶಿಕ್ಷೆಯನ್ನು ಒಂದು ನಿರ್ದಿಷ್ಟ ಕಾಲಾವಧಿಯ ವರೆಗೆ ತಡೆದಿರಿಸಿದಾಗ, "ಅದನ್ನು ಯಾವ ವಸ್ತು ತಡೆಹಿಡಿಯಿತು?" ಎಂದು ಅವರು ಕೇಳುತ್ತಾರೆ. ಕೇಳಿರಿ! ಆ ಶಿಕ್ಷೆಯ ಸಮಯ

وَلَئِنْ أَخَّرْنَا عَنْهُمُ الْعَذَابَ إِلَىٰ أُمَّةٍ
مَعْدُودَةٍ لَيَقُولُنَّ مَا يَحْبِسُهُ ۗ أَلَا يَوْمَ
يَأْتِيهِمْ لَيْسَ مَصْرُوفًا عَنْهُمْ وَحَاقَ

4. ಮಕ್ಕಾದ ಸತ್ಯನಿಷೇಧಿಗಳು ಪ್ರವಾದಿವರ್ಯರು(ಸ) ಎದುರಾಗದಿರಲೆಂದು ತಮ್ಮ ದಿಕ್ಕನ್ನು ಬದಲಿಸಿಕೊಳ್ಳುತ್ತಿದ್ದರು.

***ಇಲ್ಲಿಂದ 12ನೆಯ ಕಾಂಡ ಆರಂಭ.**

5. ಅರ್ಥಾತ್- ಸೃಷ್ಟಿಸುವುದರ ಉದ್ದೇಶ ಲೋಕದಲ್ಲಿ ಮಾನವರನ್ನು ಸೃಷ್ಟಿಸಿ ಅವನನ್ನು ಪರೀಕ್ಷಿಸುವುದಾಗಿತ್ತು.

6. ಇಲ್ಲಿ 'ನೀರು' ಎಂದು ಯಾವುದರ ಬಗ್ಗೆ ಹೇಳಲಾಗಿದೆ ಎಂದು ನಾವು ಹೇಳುವಂತಿಲ್ಲ. ಅದು 'ನೀರು' ಎಂದು ನಾವು ಗುರುತಿಸುವ ವಸ್ತುವೇ ಆಗಿದೆಯೇ ಅಥವಾ ಭೌತಿಕ ವಸ್ತುಗಳೆಲ್ಲವೂ ದ್ರವ ರೂಪದಲ್ಲಿ ಇದ್ದಾಗ ಯಾವ ರೂಪದಲ್ಲಿತ್ತು ಎಂದು ಸೂಚಿಸಲು 'ರೂಪಕವಾಗಿ' ಉಪಯೋಗಿಸಲಾದ ಪದವೇ ಎಂದು ಹೇಳುವಂತಿಲ್ಲ. 'ಅರ್ಶ್' ಅಥವಾ ವಿಶ್ವಸಿಂಹಾಸನವು ನೀರಮೇಲಿತ್ತು ಎಂಬುದರ ವ್ಯಾಖ್ಯಾನವನ್ನು ನಿಗದಿಪಡಿಸುವುದೂ ತ್ರಾಸದಾಯಕವಾಗಿದೆ. ಪ್ರಾಯಶಃ ಆಗ ದೇವಸಾಮ್ರಾಜ್ಯ ನೀರಿನ ಮೇಲೆ ಇದ್ದಿರಬಹುದು.

7. ಅರ್ಥಾತ್ ಮರಣದ ನಂತರ ಮತ್ತೆ ಜೀವಂತಗೊಳ್ಳಲು ಸಾಧ್ಯವೇ ಇಲ್ಲ. ಆದರೆ ಈ ದುಃಸಾಧ್ಯವಾದ ವಿಷಯವನ್ನು ಒಪ್ಪಿಕೊಳ್ಳುವಂತೆ ನಮ್ಮ ಬುದ್ಧಿಗೆ ಮಾಟಮಾಡಲಾಗುತ್ತಿದೆ.

ಬಂತೆಂದರೆ ಅದನ್ನು ಯಾರಿಂದಲೂ ತಡೆಯಲಾಗದು. ಅವರು ಯಾವುದನ್ನು ಅಪಹಾಸ್ಯ ಮಾಡುತ್ತಿದ್ದರೋ ಅದೇ ಅವರನ್ನು ಮುತ್ತಿಕೊಳ್ಳುವುದು.

بِهِمْ مَّا كَانُوْا بِهٖ يَسْتَهْزِءُوْنَ ۝٨ ع

9. ನಾವು ಮಾನವನಿಗೆ ನಮ್ಮ ಕೃಪೆಯನ್ನು ನೀಡಿ ಅನಂತರ ಅದನ್ನು ಅವನಿಂದ ಕಸಿದುಕೊಂಡರೆ ಅವನು ನಿರಾಶನಾಗಿ ಕೃತಘ್ನತೆ ತೋರಲಾರಂಭಿಸುತ್ತಾನೆ.

وَلَئِنْ اَذَقْنَا الْاِنْسَانَ مِنَّا رَحْمَةً ثُمَّ
نَزَعْنٰهَا مِنْهُ ۚ اِنَّهٗ لَيَئُوْسٌ كَفُوْرٌ ۝٩

10. ಅವನ ಮೇಲೆ ಬಂದಿದ್ದ ಕಷ್ಟಗಳ ಅನಂತರ ನಾವು ಅವನಿಗೆ 'ಸೌಭಾಗ್ಯ'ಗಳ ಸವಿಯನ್ನುಣಿಸಿದಾಗ ಅವನು ನನ್ನ ಎಲ್ಲಾ ದುರದೃಷ್ಟಗಳೂ ತೊಲಗಿದುವು ಎನ್ನುತ್ತಾನೆ. ಅನಂತರ ಅವನು ಆನಂದ ತುಂದಿಲನಾಗುತ್ತಾನೆ ಮತ್ತು ಅಹಂಕಾರ ಪಡುತ್ತಾನೆ.

وَلَئِنْ اَذَقْنٰهُ نَعْمَآءَ بَعْدَ ضَرَّآءَ مَسَّتْهُ
لَيَقُوْلَنَّ ذَهَبَ السَّيِّاٰتُ عَنِّيْ ۭ اِنَّهٗ لَفَرِحٌ فَخُوْرٌ ۝١٠

11. ತಾಳ್ಮೆ ವಹಿಸುವವರು ಮತ್ತು ಸತ್ಕರ್ಮಿಗಳು ಮಾತ್ರ ಈ ದೋಷದಿಂದ ವಿರಹಿತರಾಗಿದ್ದಾರೆ. ಕ್ಷಮೆಯೂ ಉನ್ನತವಾದ ಪ್ರತಿಫಲವೂ ಇವರಿಗೇ ಇರುವುದು.

اِلَّا الَّذِيْنَ صَبَرُوْا وَعَمِلُوا الصّٰلِحٰتِ ۭ
اُولٰۗىِٕكَ لَهُمْ مَّغْفِرَةٌ وَّاَجْرٌ كَبِيْرٌ ۝١١

12. ಓ ಪೈಗಂಬರರೇ, ನಿಮ್ಮ ಮೇಲೆ ಅವತೀರ್ಣಗೊಳಿಸಲಾಗುತ್ತಿರುವ ದಿವ್ಯವಾಣಿಯಿಂದ ಕೆಲವನ್ನು ನೀವು (ತಿಳಿಸದೆ) ಬಿಟ್ಟುಬಿಡ ಬಾರದು. ಅವರಾಡುವ "ಈ ವ್ಯಕ್ತಿಯ ಮೇಲೊಂದು ನಿಧಿಯ ನ್ನೇಕೆ ಇಳಿಸಲಾಗಲಿಲ್ಲ?" ಅಥವಾ "ಇವನ ಸಂಗಡ ದೇವಚರ ನೋರ್ವನೇಕೆ ಬರಲಿಲ್ಲ?" ಎಂಬ ಮಾತುಗಳಿಂದಾಗಿ ನೀವು ಸಂಕೋಚ ಪಡಬೇಕಾಗಿಲ್ಲ. ನೀವಂತು ಕೇವಲ ಎಚ್ಚರಿಕೆ ಕೊಡು ವವರಾಗಿದ್ದೀರಿ. ಸಕಲ ಕಾರ್ಯಗಳ ಹೊಣೆಗಾರನು ಅಲ್ಲಾಹ ನಾಗಿರುತ್ತಾನೆ.

فَلَعَلَّكَ تَارِكٌۢ بَعْضَ مَا يُوْحٰٓى اِلَيْكَ
وَضَاۗىِٕقٌۢ بِهٖ صَدْرُكَ اَنْ يَّقُوْلُوْا لَوْلَآ
اُنْزِلَ عَلَيْهِ كَنْزٌ اَوْ جَاۗءَ مَعَهٗ مَلَكٌ ۭ اِنَّمَآ
اَنْتَ نَذِيْرٌ ۭ وَاللّٰهُ عَلٰي كُلِّ شَيْءٍ وَّكِيْلٌ ۝١٢

13. ಪೈಗಂಬರರು ಈ ಗ್ರಂಥವನ್ನು ತಾವೇ ಸೃಷ್ಟನೆ ಮಾಡಿಕೊಂಡ ರೆಂದು ಇವರು ಹೇಳುತ್ತಾರೆಯೇ! ಹಾಗಾದರೆ ಇದರಂತಹ ಹತ್ತು 'ಅಧ್ಯಾಯ'ಗಳನ್ನು ಸೃಷ್ಟಿಸಿ ತನ್ನಿರಿ ಮತ್ತು ಅಲ್ಲಾಹನ ಹೊರತು ನಿಮ್ಮ (ಪೂಜ್ಯರು) ಯಾರೆಲ್ಲ ಇರುವರೋ ಅವರನ್ನೆಲ್ಲ ಸಹಾಯಕ್ಕಾಗಿ ಕರೆಯಲು ಸಾಧ್ಯವಿದ್ದರೆ ಕರೆದುಕೊಳ್ಳಬಹುದು. ನೀವು (ಅವರನ್ನು ಪೂಜ್ಯರೆಂದು ತಿಳಿಯುವುದರಲ್ಲಿ) ಸತ್ಯವಾದಿ ಗಳಾಗಿದ್ದರೆ (ಹಾಗೆ ಮಾಡಿರಿ.)

اَمْ يَقُوْلُوْنَ افْتَرٰىهُ ۭ قُلْ فَاْتُوْا بِعَشْرِ
سُوَرٍ مِّثْلِهٖ مُفْتَرَيٰتٍ وَّادْعُوْا مَنِ
اسْتَطَعْتُمْ مِّنْ دُوْنِ اللّٰهِ اِنْ كُنْتُمْ
صٰدِقِيْنَ ۝١٣

14. ಅವರು (ನಿಮ್ಮ ಪೂಜ್ಯರು) ನಿಮ್ಮ ನೆರವಿಗೆ ಬಾರದಿದ್ದರೆ ಇದು ಅಲ್ಲಾಹನ ದಿವ್ಯಜ್ಞಾನದಿಂದ ಅವತೀರ್ಣಗೊಂಡಿದೆ ಮತ್ತು ಅವನ ಹೊರತು ಅನ್ಯ ದೇವನಿಲ್ಲವೆಂದು ಚೆನ್ನಾಗಿ ಅರಿತುಕೊಳ್ಳಿರಿ. ಇನ್ನಾದರೂ (ಈ ಪರಮಾರ್ಥದ ಮುಂದೆ) ಶರಣಾಗತರಾಗುತ್ತೀರಾ?

فَإِلَّمْ يَسْتَجِيبُوا لَكُمْ فَاعْلَمُوا أَنَّمَا أُنزِلَ
بِعِلْمِ اللَّهِ وَأَن لَّا إِلَٰهَ إِلَّا هُوَ ۖ فَهَلْ
أَنتُم مُّسْلِمُونَ ١٤

15. ಈ ಲೌಕಿಕ ಜೀವನ ಮತ್ತು ಇದರ ಬೆಡಗು ಬಿನ್ನಾಣಗಳನ್ನು ಬಯಸುವವರ ಕರ್ಮಗಳ ಸಂಪೂರ್ಣ ಪ್ರತಿಫಲವನ್ನು ನಾವು ಇಲ್ಲೇ ಕೊಟ್ಟುಬಿಡುತ್ತೇವೆ ಮತ್ತು ಇದರಲ್ಲಿ ಅವರಿಗೆ ಯಾವ ಕೊರತೆಯನ್ನೂ ಮಾಡುವುದಿಲ್ಲ.

مَن كَانَ يُرِيدُ الْحَيَاةَ الدُّنْيَا وَزِينَتَهَا
نُوَفِّ إِلَيْهِمْ أَعْمَالَهُمْ فِيهَا وَهُمْ
فِيهَا لَا يُبْخَسُونَ ١٥

16. ಆದರೆ ಇಂಥವರಿಗೆ ಪರಲೋಕದಲ್ಲಿ ನರಕಾಗ್ನಿಯ ವಿನಾ ಇನ್ನೇನೂ ಇಲ್ಲ. ಇವರು ಇಲ್ಲಿ ನಿರ್ಮಿಸಿದ್ದೆಲ್ಲವೂ ಅಳಿದು ಹೋಯಿತು ಮತ್ತು ಈಗ ಇವರು ಮಾಡಿದ್ದೆಲ್ಲವೂ ನಿರರ್ಥಕ (ಎಂದು ಅಲ್ಲಿ ತಿಳಿದು ಬರುವುದು)

أُولَٰئِكَ الَّذِينَ لَيْسَ لَهُمْ فِي الْآخِرَةِ
إِلَّا النَّارُ ۖ وَحَبِطَ مَا صَنَعُوا فِيهَا
وَبَاطِلٌ مَّا كَانُوا يَعْمَلُونَ ١٦

17. ತನ್ನ ಪ್ರಭುವಿನ ಕಡೆಯಿಂದ ಪ್ರತ್ಯಕ್ಷ ಪ್ರಮಾಣವನ್ನು ಪಡೆದ ವ್ಯಕ್ತಿಯು[8] ಆ ಬಳಿಕ (ಆ ಪ್ರಮಾಣಕ್ಕೆ ಪೂರಕವಾಗಿ) ಪ್ರಭುವಿನ ಕಡೆಯಿಂದ ಒಂದು ಸಾಕ್ಷ್ಯವೂ ಬಂದಾಗ[9] ಮತ್ತು ಅದಕ್ಕೆ ಮುಂಚೆ ಮಾರ್ಗದರ್ಶಿ ಹಾಗೂ ಕೃಪೆಯಾಗಿ ಬಂದಿದ್ದ ಮೂಸಾರ ಗ್ರಂಥವೂ ಇರುವಾಗ (ಅವನೂ ಲೋಕೋಪಾಸಕರಂತೆ ಇದನ್ನು ನಿರಾಕರಿಸಬಲ್ಲನೇ?) ಇಂತಹವರು ಖಂಡಿತ ಇದರಲ್ಲಿ ವಿಶ್ವಾಸ ಇರಿಸುವರು. ಯಾವುದಾದರೂ ಜನ ವಿಭಾಗವು ಇದನ್ನು ನಿರಾಕರಿಸಿದರೆ ಅದಕ್ಕೆ ವಾಗ್ದಾನವೀಯಲಾಗಿರುವ ಸ್ಥಾನವು ನರಕಾಗ್ನಿಯೇ, ಆದುದರಿಂದ ಓ ಸಂದೇಶವಾಹಕರೇ! ಇದರ ಬಗ್ಗೆ ನೀವು ಯಾವುದೇ ಸಂದೇಹಕ್ಕೊಳಗಾಗ ಬೇಡಿರಿ. ಇದು ನಿಮ್ಮ ಪ್ರಭುವಿನಿಂದ ಬಂದಿರುವ ಪರಮ ಸತ್ಯ. ಆದರೆ ಹೆಚ್ಚಿನವರು ವಿಶ್ವಾಸವಿರಿಸುವುದಿಲ್ಲ.

أَفَمَن كَانَ عَلَىٰ بَيِّنَةٍ مِّن رَّبِّهِ وَ
يَتْلُوهُ شَاهِدٌ مِّنْهُ وَمِن قَبْلِهِ كِتَابُ
مُوسَىٰ إِمَامًا وَرَحْمَةً ۚ أُولَٰئِكَ يُؤْمِنُونَ
بِهِ ۚ وَمَن يَكْفُرْ بِهِ مِنَ الْأَحْزَابِ
فَالنَّارُ مَوْعِدُهُ ۚ فَلَا تَكُ فِي مِرْيَةٍ
مِّنْهُ ۚ إِنَّهُ الْحَقُّ مِن رَّبِّكَ وَلَٰكِنَّ
أَكْثَرَ النَّاسِ لَا يُؤْمِنُونَ ١٧

8. ಅರ್ಥಾತ್- ಮಾನವನಿಗೆ ತನ್ನ ಅಸ್ತಿತ್ವ, ಭೂಮಿ-ಆಕಾಶಗಳ ಸೃಷ್ಟಿ ಮತ್ತು ನಿಸರ್ಗ ವ್ಯವಸ್ಥೆಯಲ್ಲೇ ಈ ಲೋಕಕ್ಕೆ ಒಬ್ಬ ಸೃಷ್ಟಿಕರ್ತ, ಒಡೆಯ, ಪರಿಪಾಲಕ ಮತ್ತು ಆಜ್ಞಾದೀಶನಾದ ದೇವನಿದ್ದಾನೆ ಎಂಬುದರ ಸಾಕ್ಷ್ಯ ಪ್ರಾಪ್ತವಾಗುತ್ತದೆ. ಈ ಸಾಕ್ಷ್ಯಗಳ ಆಧಾರದಲ್ಲೇ ಈ ಜೀವನದ ನಂತರ ಮತ್ತೊಂದು ಜೀವನ ಇರಲೇಬೇಕಾಗಿದೆ. ಅದರಲ್ಲಿ ಮಾನವ ತನ್ನ ಕರ್ಮಗಳ ಬಗ್ಗೆ ತನ್ನೊಡೆಯನಿಗೆ ಲೆಕ್ಕ ಸಮರ್ಪಣೆ ಮಾಡಬೇಕಾಗಿದೆ ಮತ್ತು ತಾನು ಮಾಡಿರುವುದರ ಶಿಕ್ಷೆ-ರಕ್ಷೆಗಳನ್ನು ಪಡೆಯಬೇಕಾಗಿದೆ ಎಂಬುದರ ಬಗೆಗೂ ಅವನ ಮನಸ್ಸು ಸಾಕ್ಷ್ಯ ನುಡಿಯುತ್ತದೆ.

9. ಅರ್ಥಾತ್- ಕುರ್‌ಆನ್ ಗ್ರಂಥ. ಅದು ಬಂದ ನಂತರ ಪ್ರಸ್ತುತ ನೈಸರ್ಗಿಕ ಮತ್ತು ವೈಚಾರಿಕ ಸಾಕ್ಷ್ಯಾಧಾರಗಳನ್ನು ಸಮರ್ಥಿಸಿತು. ಮಾನವ ತನ್ನ ವ್ಯಕ್ತಿತ್ವ ಮತ್ತು ನಿಸರ್ಗದಲ್ಲಿ ಕಾಣುವ ಸಾಕ್ಷ್ಯಾಧಾರಗಳೇ ವಾಸ್ತವದಲ್ಲಿ ಸತ್ಯವಾಗಿದೆ ಎಂಬುದನ್ನು ಅದು ಅವನಿಗೆ ತಿಳಿಸಿಕೊಟ್ಟಿತು.

18. ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವನಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು?[10] ಇಂಥವರು ತಮ್ಮ ಪ್ರಭುವಿನ ಮುಂದೆ ತರಲ್ಪಡುವರು ಮತ್ತು ತಮ್ಮ ಪ್ರಭುವಿನ ಮೇಲೆ ಸುಳ್ಳಾರೋಪ ಹೊರಿಸಿದವರು ಇವರೇ ಎಂದು ಸಾಕ್ಷಿದಾರರು ಹೇಳುವರು. ಕೇಳಿರಿ! ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ.[11]

وَمَنْ أَظْلَمُ مِمَّنِ افْتَرَىٰ عَلَى اللَّهِ
كَذِبًا ۚ أُولَٰئِكَ يُعْرَضُونَ عَلَىٰ رَبِّهِمْ
وَيَقُولُ الْأَشْهَادُ هَٰؤُلَاءِ الَّذِينَ كَذَبُوا
عَلَىٰ رَبِّهِمْ ۚ أَلَا لَعْنَةُ اللَّهِ عَلَى الظَّالِمِينَ ﴿١٨﴾

19. ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯುವ, ಆ ಮಾರ್ಗವನ್ನು ವಕ್ರಗೊಳಿಸುವ ಮತ್ತು ಪರಲೋಕವನ್ನು ನಿರಾಕರಿಸುವಂತಹ ಅಕ್ರಮಿಗಳ ಮೇಲೆ.

الَّذِينَ يَصُدُّونَ عَنْ سَبِيلِ اللَّهِ وَ
يَبْغُونَهَا عِوَجًا ۖ وَهُمْ بِالْآخِرَةِ
هُمْ كَافِرُونَ ﴿١٩﴾

20. ಅವರು ಭೂಮಿಯಲ್ಲಿ ಅಲ್ಲಾಹನನ್ನು ಅಸಹಾಯಕನಾಗಿ ಮಾಡಬಲ್ಲವರಾಗಿರಲಿಲ್ಲ ಮತ್ತು ಅಲ್ಲಾಹನೆದುರು ಅವರಿಗಾರೂ ಸಹಾಯಕನೂ ಇರಲಿಲ್ಲ. ಅವರಿಗೀಗ ಇಮ್ಮಡಿ ಯಾತನೆ ಕೊಡಲಾಗುವುದು. ಅವರು ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಸ್ವತಃ ಅವರಿಗೇನೂ ಹೊಳೆಯುತ್ತಲೂ ಇರಲಿಲ್ಲ.

أُولَٰئِكَ لَمْ يَكُونُوا مُعْجِزِينَ فِي الْأَرْضِ
وَمَا كَانَ لَهُمْ مِنْ دُونِ اللَّهِ مِنْ أَوْلِيَاءَ ۘ
يُضَاعَفُ لَهُمُ الْعَذَابُ ۚ مَا كَانُوا يَسْتَطِيعُونَ
السَّمْعَ وَمَا كَانُوا يُبْصِرُونَ ﴿٢٠﴾

21. ಅವರು ತಮ್ಮನ್ನು ತಾವೇ ನಷ್ಟಕ್ಕೆ ಗುರಿಪಡಿಸಿಕೊಂಡವರು. ಇವರು ಸೃಜಿಸಿಕೊಂಡದ್ದೆಲ್ಲವೂ ಇವರಿಂದ ಕಳೆದುಹೋಯಿತು.

أُولَٰئِكَ الَّذِينَ خَسِرُوا أَنْفُسَهُمْ وَضَلَّ
عَنْهُمْ مَا كَانُوا يَفْتَرُونَ ﴿٢١﴾

22. ಪರಲೋಕದಲ್ಲಿ ಇವರೇ ಅತ್ಯಧಿಕ ನಷ್ಟ ಹೊಂದುವುದು ಅನಿವಾರ್ಯ.

لَا جَرَمَ أَنَّهُمْ فِي الْآخِرَةِ هُمُ الْأَخْسَرُونَ ﴿٢٢﴾

23. ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೂ ತಮ್ಮ ಪ್ರಭುವಿನವರೇ ಆಗಿಬಿಟ್ಟವರೂ ನಿಶ್ಚಯವಾಗಿಯೂ ಸ್ವರ್ಗದವರು. ಅವರು ಅದರಲ್ಲಿ ಸದಾಕಾಲ ವಾಸಿಸುವರು.

إِنَّ الَّذِينَ آمَنُوا وَعَمِلُوا الصَّالِحَاتِ
وَأَخْبَتُوا إِلَىٰ رَبِّهِمْ أُولَٰئِكَ أَصْحَابُ
الْجَنَّةِ ۖ هُمْ فِيهَا خَالِدُونَ ﴿٢٣﴾

24. ಈ ಎರಡು ವರ್ಗದವರ ಉಪಮೆ ಹೀಗಿದೆ- ಒಬ್ಬನು ಕುರುಡನೂ ಕಿವುಡನೂ ಆಗಿದ್ದಾನೆ. ಇನ್ನೊಬ್ಬನು ದೃಷ್ಟಿ ಮತ್ತು ಶ್ರವಣವುಳ್ಳವನೂ ಆಗಿದ್ದಾನೆ. ಇವರಿಬ್ಬರೂ ಸಮಾನರಾಗಬಲ್ಲರೇ?

مَثَلُ الْفَرِيقَيْنِ كَالْأَعْمَىٰ وَالْأَصَمِّ
وَالْبَصِيرِ وَالسَّمِيعِ ۚ هَلْ يَسْتَوِيَانِ

10. ಅರ್ಥಾತ್- ದೇವತ್ವ ಮತ್ತು ದಾಸ್ಯ-ಅನುಸರಣೆ ಮಾಡಿಸುವ ಅವನ ಹಕ್ಕಿನಲ್ಲಿ ಇತರರೂ ಭಾಗೀದಾರರು ಎಂದು ಹೇಳುವುದು, ದೇವನಿಗೆ ತನ್ನ ದಾಸರ ಸನ್ಮಾರ್ಗದರ್ಶನದ ಅಥವಾ ಪಥಭ್ರಷ್ಟತೆಯಲ್ಲಿ ಯಾವುದೇ ಆಸಕ್ತಿಯಿಲ್ಲ. ಅವನು ನಮ್ಮ ಮಾರ್ಗದರ್ಶನಕ್ಕಾಗಿ ಯಾವುದೇ ಪ್ರವಾದಿ ಅಥವಾ ಗ್ರಂಥವನ್ನು ಕಳುಹಿಸಿಲ್ಲ. ನಮ್ಮ ಜೀವನಕ್ಕೆ ಯಾವ ಶೈಲಿಯನ್ನು ಬೇಕಾದರೂ ಅಳವಡಿಸಿಕೊಳ್ಳಲು ಅವನು ನಮ್ಮನ್ನು ಸ್ವತಂತ್ರವಾಗಿ ಬಿಟ್ಟು ಬಿಟ್ಟಿದ್ದಾನೆ. ದೇವನು ನಮ್ಮನ್ನು ಹೀಗೆಯೇ ವಿನೋದಕ್ಕಾಗಿ ಸೃಷ್ಟಿಸಿದ್ದಾನೆ ಮತ್ತು ಹಾಗೆಯೇ ನಮಗೆ ಅಂತ್ಯವನ್ನೂ ನೀಡುತ್ತಾನೆ. ಅವನ ಮುಂದೆ ನಾವು ಯಾವುದೇ ರೀತಿಯ ಉತ್ತರದಾಯಿತ್ವವನ್ನೂ ಹೊಂದಿಲ್ಲ. ಯಾವುದೇ ರೀತಿಯ ಶಿಕ್ಷೆ-ರಕ್ಷೆಗಳು ಎದುರಾಗಲಿಕ್ಕಿಲ್ಲ ಎಂದೆಲ್ಲಾ ಹೇಳುವುದಾಗಿದೆ.

11. ವಿವರಣಾ ಶೈಲಿಯಿಂದ, ಈ ಮಾತನ್ನು ಪರಲೋಕದಲ್ಲಿ ಅವರು ಹಾಜರುಗೊಳಿಸಲ್ಪಡುವಾಗ ಹೇಳಲಾಗುವುದು ಎಂದು ವ್ಯಕ್ತವಾಗುತ್ತದೆ.

ನೀವು ಈ ಉಪಮೆಯಿಂದ ಪಾಠವೇನಾದರೂ ಕಲಿಯುವುದಿಲ್ಲವೇಕೆ?

مَثَلًا ۚ اَفَلَا تَذَكَّرُوْنَ ﴿٢٤﴾

25. ನಾವು ನೂಹರನ್ನು ಅವರ ಜನಾಂಗದ ಕಡೆಗೆ ಕಳುಹಿಸಿದ್ದಾಗ (ಇಂತಹ ಪರಿಸ್ಥಿತಿಯೇ ಇತ್ತು) ನೂಹರು ಇಂತೆಂದರು, "ನಾನು ನಿಮಗೆ ಸುವ್ಯಕ್ತ ಎಚ್ಚರಿಕೆ ನೀಡುತ್ತೇನೆ.

وَلَقَدْ اَرْسَلْنَا نُوْحًا اِلٰى قَوْمِهٖٓ ۫ اِنِّيْ لَكُمْ نَذِيْرٌ مُّبِيْنٌ ﴿٢٥﴾

26. ನೀವು ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡಬೇಡಿರಿ. ಅನ್ಯಥಾ ನಿಮ್ಮ ಮೇಲೆ ಒಂದು ದಿನ ವೇದನಾಯುಕ್ತ ಯಾತನೆ ಎರಗುವುದೆಂದು ನಾನು ಭಯಪಡುತ್ತೇನೆ."

اَنْ لَّا تَعْبُدُوْٓا اِلَّا اللّٰهَ ۭ اِنِّيْٓ اَخَافُ عَلَيْكُمْ عَذَابَ يَوْمٍ اَلِيْمٍ ﴿٢٦﴾

27. ಅವರ ಮಾತನ್ನು ನಿರಾಕರಿಸಿದ್ದ ಅವರ ಜನಾಂಗದ ಸರದಾರರು ಹೀಗೆಂದರು-"ನೀವು ನಮ್ಮ ದೃಷ್ಟಿಯಲ್ಲಿ ನಮ್ಮಂತಹ ಒಬ್ಬ ಮನುಷ್ಯನಾಗಿರುವಿರೇ ವಿನಾ ಇನ್ನೇನೂ ಅಲ್ಲ. ನಮ್ಮ ಜನಾಂಗದಲ್ಲಿ ನೀಚರಾಗಿದ್ದವರು ಮಾತ್ರ ಹಿಂದು ಮುಂದು ನೋಡದೆ ನಿಮ್ಮನ್ನು ಅನುಸರಿಸುತ್ತಿರುವುದನ್ನು ನಾವು ಕಾಣುತ್ತೇವೆ. ನೀವು ನಮಗಿಂತ ಯಾವ ವಿಷಯದಲ್ಲೂ ಶ್ರೇಷ್ಠರಾಗಿರುವುದನ್ನು ನಾವು ಕಾಣುವುದಿಲ್ಲ. ಮಾತ್ರವಲ್ಲ ನಾವು ನಿಮ್ಮನ್ನು ಸುಳ್ಳುಗಾರನೆಂದೆಣಿಸುತ್ತೇವೆ."

فَقَالَ الْمَلَاُ الَّذِيْنَ كَفَرُوْا مِنْ قَوْمِهٖ مَا نَرٰىكَ اِلَّا بَشَرًا مِّثْلَنَا وَمَا نَرٰىكَ اتَّبَعَكَ اِلَّا الَّذِيْنَ هُمْ اَرَاذِلُنَا بَادِيَ الرَّاْيِ ۚ وَمَا نَرٰى لَكُمْ عَلَيْنَا مِنْ فَضْلٍۢ بَلْ نَظُنُّكُمْ كٰذِبِيْنَ ﴿٢٧﴾

28. ಅವರು (ಹೀಗೆ) ಹೇಳಿದರು- "ಓ ನನ್ನ ಜನಾಂಗ ಬಾಂಧವರೇ, ನೀವೇ ಯೋಚಿಸಿರಿ, ನಾನು ನನ್ನ ಪ್ರಭುವಿನ ಕಡೆಯಿಂದ ಒಂದು ಸ್ಪಷ್ಟ ಆಧಾರ ಪ್ರಮಾಣದಲ್ಲಿ ಸ್ಥಿರವಾಗಿದ್ದೆ. ತರುವಾಯ ಅವನು ನನಗೆ ತನ್ನ ವಿಶೇಷ ಕೃಪೆಯನ್ನೂ ಪ್ರದಾನ ಮಾಡಿದನು. ಆದರೆ ಅದು ನಿಮಗೆ ಗೋಚರಿಸಲಿಲ್ಲ. ಹೀಗಿರುವಾಗ ನೀವು ಒಪ್ಪದಿದ್ದರೂ ನಾವು ಬಲಾತ್ಕರಿಸಿ ನಿಮ್ಮ ತಲೆಗೆ ಲೇಪಿಸಲು ನಮ್ಮಲ್ಲೇನು ಸಾಧನವಿದೆ?

قَالَ يٰقَوْمِ اَرَءَيْتُمْ اِنْ كُنْتُ عَلٰى بَيِّنَةٍ مِّنْ رَّبِّيْ وَاٰتٰىنِيْ رَحْمَةً مِّنْ عِنْدِهٖ فَعُمِّيَتْ عَلَيْكُمْ ۭ اَنُلْزِمُكُمُوْهَا وَاَنْتُمْ لَهَا كٰرِهُوْنَ ﴿٢٨﴾

29. ಓ ನನ್ನ ಜನಾಂಗ ಬಾಂಧವರೇ, ನಾನು ಈ ಕೆಲಸದ ಬಗ್ಗೆ ನಿಮ್ಮಿಂದ ಹಣ ಕೇಳುವುದಿಲ್ಲ. ನನ್ನ ಪ್ರತಿಫಲ ಅಲ್ಲಾಹನಲ್ಲಿದೆ. ನನ್ನ ಮಾತು ನಂಬಿದವರನ್ನು ಹೊರದಬ್ಬಿಬಿಡಲಿಕ್ಕೂ ನನ್ನಿಂದ ಸಾಧ್ಯವಾಗದು. ಅವರು ತಾವೇ ತಮ್ಮ ಪ್ರಭುವಿನ ಸನ್ನಿಧಿಗೆ ಹೋಗುವವರು. ಆದರೆ ನೀವು ತಿಳಿಗೇಡಿತನದಿಂದ ವರ್ತಿಸುತ್ತಿರುವುದನ್ನು ನಾನು ಕಾಣುತ್ತಿದ್ದೇನೆ.

وَيٰقَوْمِ لَآ اَسْـَٔلُكُمْ عَلَيْهِ مَالًا ۭ اِنْ اَجْرِيَ اِلَّا عَلَى اللّٰهِ وَمَآ اَنَا بِطَارِدِ الَّذِيْنَ اٰمَنُوْا ۭ اِنَّهُمْ مُّلٰقُوْا رَبِّهِمْ وَلٰكِنِّيْٓ اَرٰىكُمْ قَوْمًا تَجْهَلُوْنَ ﴿٢٩﴾

30. ಓ ನನ್ನ ಜನಾಂಗ ಬಾಂಧವರೇ, ನಾನು ಇವರನ್ನು ತಳ್ಳಿಬಿಟ್ಟರೆ ಅಲ್ಲಾಹನ ಹಿಡಿತದಿಂದ ನನ್ನನ್ನು ಕಾಪಾಡಲು ಯಾರು ಬಂದಾರು? ನಿಮಗೆ ಇಷ್ಟೂ ತಿಳಿಯುವುದಿಲ್ಲವೇ?

وَيٰقَوْمِ مَنْ يَّنْصُرُنِيْ مِنَ اللّٰهِ اِنْ
طَرَدْتُّهُمْ ؕ اَفَلَا تَذَكَّرُوْنَ ۝٣٠

31. ನನ್ನ ಬಳಿ ಅಲ್ಲಾಹನ ಭಂಡಾರವಿದೆಯೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ನಾನು ಪರೋಕ್ಷದ ಜ್ಞಾನಿಯೆಂದೂ ಹೇಳುವುದಿಲ್ಲ. ನಾನೊಬ್ಬ ದೇವಚರನಾಗಿದ್ದೇನೆಂದೂ ನಾನು ವಾದಿಸುತ್ತಿಲ್ಲ. ನಿಮ್ಮ ದೃಷ್ಟಿಗೆ ಕೀಳಾಗಿ ಕಾಣಿಸುತ್ತಿರುವವರಿಗೆ ಅಲ್ಲಾಹನು ಒಳಿತನ್ನೇನೂ ನೀಡಿರುವುದಿಲ್ಲವೆಂದೂ ನಾನು ಹೇಳಲಾರೆ. ಅವರ ಅಂತಃಕರಣದ ಸ್ಥಿತಿಯನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ನಾನು ಹಾಗೆ ಹೇಳಿಬಿಟ್ಟರೆ ಅಕ್ರಮಿಯಾದೇನು."

وَلَاۤ اَقُوْلُ لَكُمْ عِنْدِيْ خَزَآئِنُ اللّٰهِ
وَلَاۤ اَعْلَمُ الْغَيْبَ وَلَاۤ اَقُوْلُ اِنِّيْ مَلَكٌ
وَّلَاۤ اَقُوْلُ لِلَّذِيْنَ تَزْدَرِيْۤ اَعْيُنُكُمْ
لَنْ يُّؤْتِيَهُمُ اللّٰهُ خَيْرًا ؕ اَللّٰهُ اَعْلَمُ بِمَا
فِيْۤ اَنْفُسِهِمْ ۚۖ اِنِّيْۤ اِذًا لَّمِنَ الظّٰلِمِيْنَ ۝٣١

32. ಕೊನೆಗೆ ಅವರು ಹೀಗೆಂದರು- "ಓ ನೂಹ್! ನೀವು ನಮ್ಮೊಡನೆ ವಾಗ್ವಾದ ನಡೆಸಿದಿರಿ, ತುಂಬಾ ನಡೆಸಿದಿರಿ. ಇನ್ನು ನೀವು ಸತ್ಯವಾದಿಯಾಗಿದ್ದರೆ ನೀವು ನಮಗೆ ಬೆದರಿಕೆ ಹಾಕುತ್ತಿರುವ ಆ ಯಾತನೆಯನ್ನು ಬರಮಾಡಿಸಿರಿ."

قَالُوْا يٰنُوْحُ قَدْ جٰدَلْتَنَا فَاَكْثَرْتَ
جِدَالَنَا فَاْتِنَا بِمَا تَعِدُنَاۤ اِنْ كُنْتَ
مِنَ الصّٰدِقِيْنَ ۝٣٢

33. ನೂಹ್ ಹೀಗೆ ಉತ್ತರ ಕೊಟ್ಟರು: "ಅಲ್ಲಾಹನಿಚ್ಛಿಸಿದರೆ ಅವನೇ ಅದನ್ನು ತರುವನು. ನೀವು ಅದನ್ನು ತಡೆಯುವಷ್ಟು ಸಾಮರ್ಥ್ಯ ಹೊಂದಿರುವುದಿಲ್ಲ.

قَالَ اِنَّمَا يَاْتِيْكُمْ بِهِ اللّٰهُ اِنْ شَآءَ وَمَاۤ
اَنْتُمْ بِمُعْجِزِيْنَ ۝٣٣

34. ಇನ್ನು ನಾನು ನಿಮಗೇನಾದರೂ ಹಿತವನ್ನು ಮಾಡಲು ಬಯಸಿದರೂ ಅಲ್ಲಾಹನೇ ನಿಮ್ಮನ್ನು ದಾರಿ ತಪ್ಪಿಸಲಿಚ್ಛಿಸಿರುವಾಗ[12] ನನ್ನ ಹಿತಾಕಾಂಕ್ಷೆಯೇನೂ ನಿಮಗೆ ಫಲ ಕೊಡಲಾರದು. ಅವನೇ ನಿಮ್ಮ ಪ್ರಭು ಮತ್ತು ಅವನಲ್ಲಿಗೇ ನೀವು ಮರಳಲಿಕ್ಕಿದ್ದೀರಿ."

وَلَا يَنْفَعُكُمْ نُصْحِيْۤ اِنْ اَرَدْتُّ اَنْ اَنْصَحَ
لَكُمْ اِنْ كَانَ اللّٰهُ يُرِيْدُ اَنْ يُّغْوِيَكُمْ ؕ هُوَ
رَبُّكُمْ ۫ وَاِلَيْهِ تُرْجَعُوْنَ ۝٣٤

35. ಓ ಪೈಗಂಬರರೇ, ಇದನ್ನೆಲ್ಲಾ ಈ ವ್ಯಕ್ತಿ ಸ್ವಯಂ ರಚಿಸಿಕೊಂಡಿದ್ದಾನೆಂದು ಇವರು ಹೇಳುತ್ತಿದ್ದಾರೇನು? ಇವರೊಡನೆ ಹೇಳಿರಿ, "ಇದನ್ನು ನಾನೇ ರಚಿಸಿದ್ದಾದರೆ ನನ್ನ ಅಪರಾಧದ ಹೊಣೆ ನನ್ನ ಮೇಲೆ ಇದೆ ಮತ್ತು ನೀವು ಮಾಡುತ್ತಿರುವ ಅಪರಾಧದಿಂದ ನಾನು ಮುಕ್ತನಾಗಿರುತ್ತೇನೆ."

اَمْ يَقُوْلُوْنَ افْتَرٰىهُ ؕ قُلْ اِنِ افْتَرَيْتُهٗ فَعَلَيَّ
اِجْرَامِيْ وَاَنَا بَرِيْٓءٌ مِّمَّا تُجْرِمُوْنَ ۝٣٥

12. ಅರ್ಥಾತ್- ನಿಮ್ಮ ಹಟ, ದುಷ್ಟತನ ಮತ್ತು ಒಳಿತಿನ ಬಗೆಗಿರುವ ನಿರಾಸಕ್ತಿಯನ್ನು ಕಂಡು ಅಲ್ಲಾಹನೇ ನಿಮಗೆ ಸನ್ಮಾರ್ಗದರ್ಶನದ ಸೌಭಾಗ್ಯವನ್ನು ಕರುಣಿಸುವುದಿಲ್ಲವೆಂದು ಮತ್ತು ನೀವು ಬಯಸುವ ಪಥಭ್ರಷ್ಟತೆಯಲ್ಲೇ ನಿಮ್ಮನ್ನು ಅಲೆದಾಡಿಸುವುದೆಂದು ತೀರ್ಮಾನಿಸಿದ್ದರೆ, ನಿಮ್ಮ ಸುಧಾರಣೆಗಾಗಿ ನನ್ನ ಯಾವ ಪ್ರಯತ್ನವೂ ಫಲಕಾರಿಯಾಗಲಾರದು.

36. ನೂಹರಿಗೆ (ಹೀಗೆ) 'ದಿವ್ಯವಾಣಿ' ಮಾಡಲಾಯಿತು- "ನಿಮ್ಮ ಜನಾಂಗದಲ್ಲಿ ವಿಶ್ವಾಸ ಸ್ವೀಕರಿಸುವವರೆಲ್ಲ ಸ್ವೀಕರಿಸಿಯಾಯಿತು. ಇನ್ನಾರೂ ಸ್ವೀಕರಿಸುವವರಿಲ್ಲ. ಅವರ ಕುಕೃತ್ಯಗಳಿಗಾಗಿ ದುಃಖಿಸುವುದನ್ನು ತೊರೆಯಿರಿ.

وَأُوحِيَ إِلَىٰ نُوحٍ أَنَّهُ لَن يُؤْمِنَ مِن
قَوْمِكَ إِلَّا مَن قَدْ آمَنَ فَلَا تَبْتَئِسْ
بِمَا كَانُوا يَفْعَلُونَ ٣٦

37. ಮತ್ತು ನಮ್ಮ ಮೇಲ್ನೋಟದಲ್ಲಿ ನಮ್ಮ ಮಾರ್ಗದರ್ಶನದ ಪ್ರಕಾರ ಒಂದು ನಾವೆಯನ್ನು ಕಟ್ಟಲಾರಂಭಿಸಿರಿ. ಅಕ್ರಮಿಗಳ ಪರವಾಗಿ ನಮ್ಮೊಡನೆ ಶಿಫಾರಸು ಮಾಡಬಾರದು. ನಿಶ್ಚಯ ವಾಗಿಯೂ ಇವರೆಲ್ಲರೂ ಮುಳುಗಿಸಲ್ಪಡುವವರು."

وَاصْنَعِ الْفُلْكَ بِأَعْيُنِنَا وَوَحْيِنَا وَلَا
تُخَاطِبْنِي فِي الَّذِينَ ظَلَمُوا ۚ إِنَّهُم مُّغْرَقُونَ ٣٧

38. ನೂಹರು ನಾವೆಯನ್ನು ತಯಾರಿಸುತ್ತಿದ್ದರು. ಅವರ ಜನಾಂಗದ ಸರದಾರರ ಪೈಕಿ ಅವರ ಬಳಿಯಿಂದ ಹಾದು ಹೋಗುತ್ತಿದ್ದವರು ಅವರನ್ನು ಗೇಲಿ ಮಾಡುತ್ತಿದ್ದರು. ನೂಹರು (ಹೀಗೆ) ಹೇಳಿದರು, "ನೀವು ನಮ್ಮನ್ನು ಕಂಡು ನಗುತ್ತಿದ್ದರೆ ನಾವೂ ನಿಮ್ಮನ್ನು ಕಂಡು ನಗುತ್ತಿದ್ದೇವೆ.

وَيَصْنَعُ الْفُلْكَ وَكُلَّمَا مَرَّ عَلَيْهِ مَلَأٌ
مِّن قَوْمِهِ سَخِرُوا مِنْهُ ۚ قَالَ إِن تَسْخَرُوا
مِنَّا فَإِنَّا نَسْخَرُ مِنكُمْ كَمَا تَسْخَرُونَ ٣٨

39. ಅಪಮಾನಗೊಳಿಸುವಂತಹ ಯಾತನೆಯು ಯಾರ ಮೇಲೆರಗುತ್ತದೆ ಮತ್ತು ತಪ್ಪಿಸಿದರೂ ದೂರವಾಗದಂತಹ ಆ ವಿಪತ್ತು ಯಾರ ಮೇಲೆ ಬೀಳುತ್ತದೆಂದು ಸದ್ಯದಲ್ಲೇ ನಿಮಗೆ ಸ್ವತಃ ತಿಳಿದು ಬರುವುದು.[13]

فَسَوْفَ تَعْلَمُونَ مَن يَأْتِيهِ عَذَابٌ
يُخْزِيهِ وَيَحِلُّ عَلَيْهِ عَذَابٌ مُّقِيمٌ ٣٩

40. ಕೊನೆಗೊಮ್ಮೆ ನಮ್ಮ ಆಜ್ಞೆ ಬಂದಿತು ಮತ್ತು ಆ ಭಟ್ಟಿಯು ಉಕ್ಕೇರಿತು.[14] ಆಗ ನಾವು (ಹೀಗೆ) ಹೇಳಿದೆವು: "ಪ್ರತಿ ಒಂದು

حَتَّىٰ إِذَا جَاءَ أَمْرُنَا وَفَارَ التَّنُّورُ
قُلْنَا احْمِلْ فِيهَا مِن كُلٍّ زَوْجَيْنِ اثْنَيْنِ

13. ಇದೊಂದು ವಿಚಿತ್ರ ಸಂದರ್ಭವಾಗಿದೆ. ಇದರ ಬಗ್ಗೆ ಆಲೋಚಿಸುವುದರಿಂದ ಮಾನವನು ಲೋಕದ ಬಾಹ್ಯವನ್ನು ನೋಡಿ ಯಾವ ರೀತಿ ಮೋಸ ಹೋಗುತ್ತಾನೆ ಎಂದು ತಿಳಿದುಬರುತ್ತದೆ. ನೂಹ್(ಅ) ನದಿಯಿಂದ ಬಹಳ ದೂರ ಒಣ ಪ್ರದೇಶದಲ್ಲಿ ಹಡಗು ನಿರ್ಮಿಸುತ್ತಿದ್ದಾಗ ಜನರಿಗೆ ನಿಜವಾಗಿಯೂ ಅದೊಂದು ಹಾಸ್ಯಾಸ್ಪದ ಕೆಲಸವೆಂದು ಭಾಸವಾಗಿರಬಹುದು. ಈ ಹಿರಿಯಜ್ಜನ ಅರುಳುಮರುಳು ಈಗ ಯಾವ ಮಟ್ಟಕ್ಕೆ ತಲಪಿ ಬಿಟ್ಟಿದೆಯೆಂದರೆ ಇವರು ನೆಲದ ಮೇಲೆ ಹಡಗು ಚಲಾಯಿಸಲು ಹೊರಟಿದ್ದಾರೆ ಎಂದು ಬಿದ್ದು ಬಿದ್ದು ನಗುತ್ತಾ ಹೇಳುತ್ತಿದ್ದಿರಬಹುದು. ಕೆಲದಿನಗಳ ನಂತರ ನಿಜವಾಗಿಯೂ ಇಲ್ಲಿ ಹಡಗು ಚಲಿಸುವುದು ಎಂದು ಅವರು ಪ್ರಾಯಶಃ ಕನಸು ಮನಸ್ಸಿನಲ್ಲೂ ಆಲೋಚಿಸಿರಲಿಕ್ಕಿಲ್ಲ. ಆದರೆ ವಾಸ್ತವಿಕತೆಯ ಜ್ಞಾನವಿದ್ದ ಮತ್ತು ನಾಳೆ ಇಲ್ಲಿ ಹಡಗಿನ ಎಂತಹ ಅವಶ್ಯಕತೆ ತಲೆದೋರಬಹುದೆಂದು ತಿಳಿದಿದ್ದ ವ್ಯಕ್ತಿಗೆ ಜನರ ಅಜ್ಞಾನ, ತಿಳಿಗೇಡಿತನ ಮತ್ತು ಮೂರ್ಖತನದಿಂದ ಕೂಡಿದ ಸಮಾಧಾನವನ್ನು ಕಂಡು ಅಷ್ಟೇ ನಗೆ ಬಂದಿರಬಹುದು. ಇವರೆಂತಹ ತಿಳಿಗೇಡಿಗಳು! ವಿನಾಶ ಇವರ ತಲೆಯ ಮೇಲೆ ಬಂದು ನಿಂತಿದೆ. ಅದು ಇನ್ನೇನು ಬರುವುದರಲ್ಲೇ ಇದೆ ಎಂದು ನಾನು ಅವರಿಗೆ ಎಚ್ಚರಿಕೆಯನ್ನೂ ನೀಡಿದ್ದೇನೆ. ಮಾತ್ರವಲ್ಲ ಅವರ ಕಣ್ಣೆದುರಿನಲ್ಲೇ ಅದರಿಂದ ಸುರಕ್ಷಿತವಾಗಿರಲು ಸಿದ್ಧತೆಯನ್ನೂ ಮಾಡುತ್ತಿದ್ದೇನೆ. ಆದರೆ ಇವರು ಬಹಳ ಸಂತೃಪ್ತಿಯಿಂದ ಕುಳಿತು ಬಿಟ್ಟಿದ್ದಾರೆ. ಮಾತ್ರವಲ್ಲ ತಿರುಗಿ ನನ್ನನ್ನೇ ಹುಚ್ಚನೆಂದು ಭಾವಿಸುತ್ತಿದ್ದಾರೆ ಎಂದು ಅವರು ಹೇಳುತ್ತಿರಬಹುದು.

14. ಈ ಕುರಿತು ವ್ಯಾಖ್ಯಾನಕಾರರ ಹೇಳಿಕೆಗಳು ವಿಭಿನ್ನವಾಗಿವೆ. ನಮ್ಮ ದೃಷ್ಟಿಯಲ್ಲಿ ಕುರ್‌ಆನಿನ ಸುವ್ಯಕ್ತ ಶಬ್ದಗಳಿಂದ ತಿಳಿದು ಬರುವುದೇ ಸರಿಯಾದ ತಾತ್ಪರ್ಯವಾಗಿದೆ. ಚಂಡಮಾರುತದ ಆರಂಭ ಒಂದು ವಿಶಿಷ್ಟ ಭಟ್ಟಿಯಿಂದಾಯಿತು. ಅದರ ಕೆಳಗಿನಿಂದ ನೀರಿನ ಬುಗ್ಗೆ ಚಿಮ್ಮಿ ಹರಿಯಿತು. ಇನ್ನೊಂದೆಡೆ ಆಗಸದಿಂದ ಅವ್ಯಾಹತ ಮಳೆ ಆರಂಭವಾಯಿತು. ಅಲ್ಲದೆ ಭೂಮಿಯಲ್ಲಿ ಅಲ್ಲಲ್ಲಿ ನೀರಿನ ಬುಗ್ಗೆಗಳು ಪುಟಿದೆದ್ದವು.

ಜಾತಿಯ ಪ್ರಾಣಿಗಳ ಒಂದೊಂದು ಜೋಡಿಯನ್ನು ನಾವೆಯಲ್ಲಿಟ್ಟು ಕೊಳ್ಳಿರಿ ಮೊದಲೇ ಗುರುತಿಸಲ್ಪಟ್ಟಿರುವವರ ಹೊರತು[15] ನಿಮ್ಮ ಕುಟುಂಬದವರನ್ನೂ ಹತ್ತಿಸಿಕೊಳ್ಳಿರಿ; ವಿಶ್ವಾಸವಿರಿಸಿಕೊಂಡವ ರನ್ನೂ ಕುಳ್ಳಿರಿಸಿಕೊಳ್ಳಿರಿ." ನೂಹರ ಮೇಲೆ ವಿಶ್ವಾಸವಿಟ್ಟಿದ್ದವರು ಕೆಲವೇ ಮಂದಿ ಇದ್ದರು.

وَأَهْلَكَ إِلَّا مَن سَبَقَ عَلَيْهِ الْقَوْلُ
وَمَنْ آمَنَ ۚ وَمَا آمَنَ مَعَهُ إِلَّا قَلِيلٌ ﴿٤٠﴾

41. ನೂಹರು ಇಂತೆಂದರು, "ಇದರಲ್ಲಿ ಹತ್ತಿಕೊಳ್ಳಿರಿ, ಇದು ಚಲಿಸು ವುದೂ ನಿಲ್ಲುವುದೂ ಅಲ್ಲಾಹನ ನಾಮದಿಂದಲೇ ಆಗಿರುತ್ತದೆ. ನನ್ನ ಪ್ರಭು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

وَقَالَ ارْكَبُوا فِيهَا بِسْمِ اللَّهِ مَجْرَاهَا
وَمُرْسَاهَا ۚ إِنَّ رَبِّي لَغَفُورٌ رَّحِيمٌ ﴿٤١﴾

42. ನಾವೆಯು ಇವರನ್ನೆತ್ತಿಕೊಂಡು ಚಲಿಸುತ್ತಲಿತ್ತು. ಒಂದೊಂದೇ ಅಲೆ ಪರ್ವತದಂತೆ ಏರಿ ಬರುತ್ತಿತ್ತು. ನೂಹರ ಮಗನು ದೂರದಲ್ಲಿದ್ದನು. ನೂಹರು ಕೂಗಿ ಕರೆದು ಇಂತೆಂದರು: "ಮಗನೇ, ನಮ್ಮ ಸಂಗಡ ಹತ್ತಿಕೋ. ಸತ್ಯನಿಷೇಧಿಗಳೊಂದಿಗಿರ ಬೇಡ."

وَهِيَ تَجْرِي بِهِمْ فِي مَوْجٍ كَالْجِبَالِ
وَنَادَىٰ نُوحٌ ابْنَهُ وَكَانَ فِي مَعْزِلٍ يَا بُنَيَّ
ارْكَب مَّعَنَا وَلَا تَكُن مَّعَ الْكَافِرِينَ ﴿٤٢﴾

43. ಅವನು (ಹೀಗೆ) ಪ್ರತ್ಯುತ್ತರ ಕೊಟ್ಟನು: "ನಾನೀಗಲೇ ಒಂದು ಪರ್ವತದ ಮೇಲೆ ಹತ್ತಿಕೊಳ್ಳುತ್ತೇನೆ ಅದು ನನ್ನನ್ನು ನೀರಿನಿಂದ ರಕ್ಷಿಸುವುದು." (ಅದಕ್ಕೆ) ನೂಹರು, "ಅಲ್ಲಾಹನೇ ಯಾರ ಮೇಲಾದರೂ ಕರುಣೆ ತೋರುವ ಹೊರತು ಇಂದು ಯಾವುದೂ ಅವನ ಆಜ್ಞೆಯಿಂದ ರಕ್ಷಿಸಲಾರದು" ಎಂದರು. ಅಷ್ಟರಲ್ಲಿ ಒಂದು ಅಲೆಯು ಅವರಿಬ್ಬರ ನಡುವೆ ಅಡ್ಡ ಬಂತು ಮತ್ತು ಅವನೂ ಮುಳುಗಿದವರಲ್ಲಿ ಸೇರಿ ಬಿಟ್ಟನು.

قَالَ سَآوِي إِلَىٰ جَبَلٍ يَعْصِمُنِي مِنَ
الْمَاءِ ۚ قَالَ لَا عَاصِمَ الْيَوْمَ مِنْ أَمْرِ
اللَّهِ إِلَّا مَن رَّحِمَ ۚ وَحَالَ بَيْنَهُمَا
الْمَوْجُ فَكَانَ مِنَ الْمُغْرَقِينَ ﴿٤٣﴾

44. "ಓ ಭೂಮಿಯೇ, ನಿನ್ನ ನೀರನ್ನೆಲ್ಲ ಹೀರಿಕೋ ಮತ್ತು ಓ ಆಕಾಶವೇ, ತಡೆ!" ಎಂದು ಅಪ್ಪಣೆಯಾಯಿತು. ಆ ಪ್ರಕಾರ ನೀರು ನೆಲದೊಳಗೆ ಇಂಗಿತು. ತೀರ್ಮಾನ ಆಗಿ ಹೋಯಿತು. ನೌಕೆಯು 'ಜೂದಿ'ಯಲ್ಲಿ ತಂಗಿತು.[16] ಅಕ್ರಮಿಗಳ ಜನಾಂಗ ದೂರ ತೊಲಗಿತೆಂದು ಹೇಳಲಾಯಿತು."

وَقِيلَ يَا أَرْضُ ابْلَعِي مَاءَكِ وَيَا سَمَاءُ
أَقْلِعِي وَغِيضَ الْمَاءُ وَقُضِيَ الْأَمْرُ
وَاسْتَوَتْ عَلَى الْجُودِيِّ ۖ وَقِيلَ بُعْدًا
لِّلْقَوْمِ الظَّالِمِينَ ﴿٤٤﴾

15. ಅರ್ಥಾತ್- ನಿಮ್ಮ ಮನೆಯವರ ಪೈಕಿ ಸತ್ಯನಿಷೇಧಿಗಳಾಗಿರುವವರು ಮತ್ತು ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾಗದಿರುವವರು ಎಂದು ಯಾವ ವ್ಯಕ್ತಿಗಳ ಕುರಿತು ನಿಮಗೆ ಮೊದಲೇ ತಿಳಿಸಲಾಗಿದೆಯೋ ಅವರನ್ನು ನಾವೆಯಲ್ಲಿ ಹತ್ತಿಸದಿರಿ.

16. ಜೂದಿ ಪರ್ವತ ಕುರ್ದಿಸ್ತಾನದ ಇಬ್ನ್ಉಮರ್ ದ್ವೀಪದ ವಾಯುವ್ಯ ದಿಕ್ಕಿನಲ್ಲಿದೆ. ಇಂದಿಗೂ ಅದು ಜೂದಿ ಪರ್ವತವೆಂಬ ಹೆಸರಿನಿಂದ ಖ್ಯಾತವಾಗಿದೆ.

45. ನೂಹರು ತಮ್ಮ ಪ್ರಭುವನ್ನು (ಹೀಗೆ) ಕೂಗಿ ಕರೆದರು "ಪ್ರಭೂ, ನನ್ನ ಮಗನು ನನ್ನ ಕುಟುಂಬದವನಾಗಿದ್ದಾನೆ. ನಿನ್ನ ವಾಗ್ದಾನವು ಸತ್ಯ ಮತ್ತು ನೀನು ಎಲ್ಲ ಅಧಿಪತಿಗಳ ಅಧಿಪತಿಯಾಗಿರುತ್ತಿ."

وَنَادَىٰ نُوحٌ رَّبَّهُۥ فَقَالَ رَبِّ إِنَّ ٱبْنِى
مِنْ أَهْلِى وَإِنَّ وَعْدَكَ ٱلْحَقُّ وَأَنتَ
أَحْكَمُ ٱلْحَٰكِمِينَ ﴿٤٥﴾

46. (ಅದಕ್ಕೆ ಹೀಗೆ) ಉತ್ತರ ಬಂತು, "ಓ ನೂಹ್, ಅವನು ನಿನ್ನ ಕುಟುಂಬದವನಲ್ಲ. ಅವನೊಂದು ಕೆಟ್ಟು ಹೋದ ಕಾರ್ಯ.[17] ಆದುದರಿಂದ ಯಾವುದರ ನಿಜಸ್ಥಿತಿಯು ನಿನಗೆ ತಿಳಿದಿಲ್ಲವೋ ಆ ಕುರಿತು ನನ್ನೊಡನೆ ನಿವೇದಿಸಬೇಡ. ನೀನು ಅಜ್ಞಾನಿಗಳಂತೆ ವರ್ತಿಸ ಬೇಡವೆಂದು ನಾನು ನಿನಗೆ ಉಪದೇಶಿಸುತ್ತೇನೆ."

قَالَ يَٰنُوحُ إِنَّهُۥ لَيْسَ مِنْ أَهْلِكَ ۖ إِنَّهُۥ
عَمَلٌ غَيْرُ صَٰلِحٍ ۖ فَلَا تَسْـَٔلْنِ مَا لَيْسَ
لَكَ بِهِۦ عِلْمٌ ۖ إِنِّىٓ أَعِظُكَ أَن تَكُونَ
مِنَ ٱلْجَٰهِلِينَ ﴿٤٦﴾

47. ಆ ಕೂಡಲೇ ನೂಹ್ ಹೀಗೆಂದರು; "ಓ ನನ್ನ ಪ್ರಭೂ, ನನಗೆ ತಿಳಿದಿಲ್ಲದಿರುವುದನ್ನು ನಿನ್ನಿಂದ ಬೇಡುವುದರ ಬಗ್ಗೆ ನಾನು ನಿನ್ನ ಅಭಯ ಯಾಚಿಸುತ್ತೇನೆ.[18] ನೀನು ನನ್ನನ್ನು ಕ್ಷಮಿಸದಿದ್ದರೆ ಹಾಗೂ ನನ್ನ ಮೇಲೆ ದಯೆ ತೋರದಿದ್ದರೆ ನಾನು ನಷ್ಟ ಹೊಂದುವವರಲ್ಲಾಗುವೆನು."

قَالَ رَبِّ إِنِّىٓ أَعُوذُ بِكَ أَنْ أَسْـَٔلَكَ مَا
لَيْسَ لِى بِهِۦ عِلْمٌ ۖ وَإِلَّا تَغْفِرْ لِى وَ
تَرْحَمْنِىٓ أَكُن مِّنَ ٱلْخَٰسِرِينَ ﴿٤٧﴾

48. ಅಪ್ಪಣೆಯಾಯಿತು, "ಓ ನೂಹ್, ಇಳಿದು ಬಿಡು. ನಿನ್ನ ಮೇಲೆ ಮತ್ತು ನಿನ್ನೊಂದಿಗಿರುವ ಸಮುದಾಯಗಳ ಮೇಲೆ ನಮ್ಮ ಕಡೆಯಿಂದ ಶಾಂತಿ ಮತ್ತು ಸಮೃದ್ಧಿಗಳಿವೆ. ಕೆಲವು ಸಮು ದಾಯಗಳಿಗೆ ಸ್ವಲ್ಪ ಕಾಲದ ವರೆಗೆ ಜೀವನ ಸಾಧನಗಳನ್ನು ನೀಡುವೆವು. ಅನಂತರ ಅವರಿಗೆ ನಮ್ಮ ಕಡೆಯಿಂದ ವೇದನಾಯುಕ್ತ ಯಾತನೆ ತಲುಪುವುದು."

قِيلَ يَٰنُوحُ ٱهْبِطْ بِسَلَٰمٍ مِّنَّا وَبَرَكَٰتٍ
عَلَيْكَ وَعَلَىٰٓ أُمَمٍ مِّمَّن مَّعَكَ ۚ وَأُمَمٌ
سَنُمَتِّعُهُمْ ثُمَّ يَمَسُّهُم مِّنَّا عَذَابٌ أَلِيمٌ ﴿٤٨﴾

49. ಓ ಪೈಗಂಬರರೇ, ನಿಮಗೆ 'ದಿವ್ಯವಾಣಿಯ' ಮೂಲಕ ಕೊಡುತ್ತಿರುವ ಅದೃಶ್ಯದ ವರ್ತಮಾನಗಳಿವು. ಇದಕ್ಕೆ ಮುಂಚೆ ಇವುಗಳನ್ನು ನೀವಾಗಲಿ ನಿಮ್ಮ ಜನಾಂಗವಾಗಲಿ ಅರಿತಿರಲಿಲ್ಲ. ಆದುದರಿಂದ ತಾಳ್ಮೆ ವಹಿಸಿರಿ. ಅಂತಿಮ ಪರಿಣಾಮವಂತು 'ಧರ್ಮನಿಷ್ಠರ' ಪರವಾಗಿಯೇ ಇದೆ.[19]

تِلْكَ مِنْ أَنۢبَآءِ ٱلْغَيْبِ نُوحِيهَآ إِلَيْكَ ۖ مَا
كُنتَ تَعْلَمُهَآ أَنتَ وَلَا قَوْمُكَ مِن قَبْلِ
هَٰذَا ۖ فَٱصْبِرْ ۖ إِنَّ ٱلْعَٰقِبَةَ لِلْمُتَّقِينَ ﴿٤٩﴾ ع

17. ಇದು ಹೇಗೆಂದರೆ, ಒಬ್ಬ ವ್ಯಕ್ತಿಯ ಶರೀರದ ಯಾವುದಾದರೊಂದು ಅಂಗ ಕೊಳೆತು ಹೋಗಿದ್ದು ಡಾಕ್ಟರರು ಅದನ್ನು ಕತ್ತರಿಸಿ ಎಸೆಯುವ ತೀರ್ಮಾನ ಮಾಡಿದ್ದರೆ, ರೋಗಿಯು ವೈದ್ಯರೊಡನೆ, "ಇದು ನನ್ನ ದೇಹದ ಒಂದು ಅಂಗವಾಗಿದೆ. ಇದನ್ನೇಕೆ ಕತ್ತರಿಸುತ್ತೀರಿ?" ಎಂದು ಕೇಳುತ್ತಾನೆ. ಆಗ ವೈದ್ಯರು, "ಇದು ನಿಮ್ಮ ದೇಹದ ಅಂಗವಾಗಿ ಉಳಿದಿಲ್ಲ. ಏಕೆಂದರೆ ಇದು ಕೊಳೆತು ಹೋಗಿದೆ" ಎಂದು ಉತ್ತರಿಸುತ್ತಾರೆ. ಓರ್ವ ಸಚ್ಚರಿತ ತಂದೆಯೊಂದಿಗೆ ಅವರ ಅಯೋಗ್ಯ ಪುತ್ರನ ಕುರಿತು, "ಅವನೊಂದು ಕೆಟ್ಟು ಹೋದ ಕಾರ್ಯ" ಎಂದು ಹೇಳುವುದೂ ಇದೇ ಅರ್ಥದಲ್ಲಾಗಿದೆ. ಅಂದರೆ ಅವನ ಪರಿಪಾಲನೆಗಾಗಿ ನೀವು ಮಾಡಿದ ಶ್ರಮವೆಲ್ಲಾ ವ್ಯರ್ಥವಾಯಿತು, ಕೆಲಸ ಕೆಟ್ಟು ಹೋಯಿತು ಎಂದಾಗಿದೆ.

18. ಅರ್ಥಾತ್- ಯಾವುದು ಸರಿಯಾದುದೆಂದು ತನಗೆ ತಿಳಿದಿಲ್ಲವೋ ಅಂತಹ ಬೇಡಿಕೆಯನ್ನು ಮುಂದಿರಿಸುವುದು.

19. ಅರ್ಥಾತ್- ಕಟ್ಟಕಡೆಗೆ ನೂಹ್(ಅ) ಮತ್ತು ಅವರ ಸಂಗಡಿಗರೇ ಯಶಸ್ವಿಯಾದಂತೆ, ನೀವು ಮತ್ತು ನಿಮ್ಮ ಸಂಗಾತಿಗಳೂ

50. ನಾವು 'ಆದ್' ಜನಾಂಗದೆಡೆಗೆ ಅವರ ಬಂಧು ಹೂದರನ್ನು ಕಳುಹಿಸಿದೆವು. ಅವರು ಹೀಗೆಂದರು, "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ಇನ್ನಾರೂ ನಿಮ್ಮ ಆರಾಧ್ಯನಿಲ್ಲ. ನೀವು ಕೇವಲ ಸುಳ್ಳು ಸೃಷ್ಟನೆ ಮಾಡಿ ಕೊಂಡಿರುತ್ತೀರಿ.

وَاِلٰی عَادٍ اَخَاهُمْ هُوْدًا ؕ قَالَ یٰقَوْمِ
اعْبُدُوا اللّٰهَ مَا لَكُمْ مِّنْ اِلٰهٍ غَیْرُهٗ ؕ
اِنْ اَنْتُمْ اِلَّا مُفْتَرُوْنَ ﴿۵۰﴾

51. ಓ ನನ್ನ ಜನಾಂಗ ಬಾಂಧವರೇ, ಈ ಕಾರ್ಯಕ್ಕಾಗಿ ನಾನು ನಿಮ್ಮಿಂದೇನೂ ಪ್ರತಿಫಲ ಅಪೇಕ್ಷಿಸುವುದಿಲ್ಲ. ನನ್ನ ಪ್ರತಿಫಲವು ನನ್ನನ್ನು ಸೃಷ್ಟಿಸಿದವನ ಬಳಿ ಇದೆ. ನೀವು ಕೊಂಚವೂ ವಿವೇಚಿಸು ವುದಿಲ್ಲವೇ?

یٰقَوْمِ لَاۤ اَسْـَٔلُكُمْ عَلَیْهِ اَجْرًا ؕ اِنْ اَجْرِیَ
اِلَّا عَلَی الَّذِیْ فَطَرَنِیْ ؕ اَفَلَا تَعْقِلُوْنَ ﴿۵۱﴾

52. ಓ ನನ್ನ ಜನಾಂಗ ಬಾಂಧವರೇ, ನಿಮ್ಮ ಪ್ರಭುವಿನೊಡನೆ ಕ್ಷಮೆ ಯಾಚಿಸಿರಿ ಮತ್ತು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ಮರಳಿರಿ. ಅವನು ನಿಮ್ಮ ಮೇಲೆ ಆಕಾಶದಿಂದ ಧಾರಾಕಾರವಾಗಿ ಮಳೆ ಸುರಿಸುವನು ಮತ್ತು ನಿಮ್ಮ ಈಗಿನ ಶಕ್ತಿಗೆ ಇನ್ನಷ್ಟು ಶಕ್ತಿಯನ್ನು ವರ್ಧಿಸಿ ಕೊಡುವನು. ಅಪರಾಧಿಗಳಾಗಿ (ದಾಸ್ಯ-ಆರಾಧನೆಯಿಂದ) ವಿಮುಖರಾಗಬೇಡಿರಿ.

وَیٰقَوْمِ اسْتَغْفِرُوْا رَبَّكُمْ ثُمَّ تُوْبُوْۤا اِلَیْهِ
یُرْسِلِ السَّمَآءَ عَلَیْكُمْ مِّدْرَارًا وَّیَزِدْكُمْ
قُوَّةً اِلٰی قُوَّتِكُمْ وَلَا تَتَوَلَّوْا مُجْرِمِیْنَ ﴿۵۲﴾

53. ಅವರು (ಹೀಗೆ) ಉತ್ತರ ಕೊಟ್ಟರು, "ಓ ಹೂದ್, ನೀವು ನಮ್ಮ ಬಳಿಗೆ ಪ್ರತ್ಯಕ್ಷ ಪ್ರಮಾಣ ತರಲಿಲ್ಲ. ನಿಮ್ಮ ಮಾತನ್ನು ಕೇಳಿ ನಾವು ನಮ್ಮ ಪೂಜ್ಯರನ್ನು ತ್ಯಜಿಸಲಾರೆವು ಮತ್ತು ನಿಮ್ಮ ಮೇಲೆ ವಿಶ್ವಾಸವಿಡಲಾರೆವು.

قَالُوْا یٰهُوْدُ مَا جِئْتَنَا بِبَیِّنَةٍ وَّمَا نَحْنُ
بِتَارِكِیْۤ اٰلِهَتِنَا عَنْ قَوْلِكَ وَمَا نَحْنُ
لَكَ بِمُؤْمِنِیْنَ ﴿۵۳﴾

54. ನಿಮ್ಮ ಮೇಲೆ ನಮ್ಮ ಆರಾಧ್ಯರುಗಳ ಪೈಕಿ ಯಾರದೋ ಶಾಪ ಬಿದ್ದಿದೆಯೆಂದು ನಾವು ತಿಳಿಯುತ್ತೇವೆ"[20] ಹೂದ್ ಹೇಳಿದರು: "ನಾನು ಅಲ್ಲಾಹನ ಸಾಕ್ಷ್ಯವನ್ನು ಮುಂದಿರಿಸುತ್ತೇನೆ. ನೀವು ಅಲ್ಲಾಹನ ಹೊರತು ದೇವತ್ವದಲ್ಲಿ ಭಾಗೀದಾರರನ್ನಾಗಿಸಿಕೊಂಡಿ ರುವ ಇತರರಿಂದ ನಾನು ಮುಕ್ತನಾಗಿದ್ದೇನೆಂಬ ಬಗ್ಗೆ ನೀವು ಸಾಕ್ಷಿಯಾಗಿರಿ.

اِنْ نَّقُوْلُ اِلَّا اعْتَرٰىكَ بَعْضُ اٰلِهَتِنَا
بِسُوْٓءٍ ؕ قَالَ اِنِّیْۤ اُشْهِدُ اللّٰهَ وَاشْهَدُوْۤا
اَنِّیْ بَرِیْٓءٌ مِّمَّا تُشْرِكُوْنَ ﴿۵۴﴾

ಜಯಶೀಲರಾಗುವಿರಿ. ಆದ್ದರಿಂದ ಈ ಸಂದರ್ಭದಲ್ಲಿ ನೀವು ಯಾವ ಸಂಕಷ್ಟ ಮತ್ತು ಯಾತನೆಗಳನ್ನು ಎದುರಿಸುತ್ತಿರುವಿರೋ ಆ ಬಗ್ಗೆ ವ್ಯಾಕುಲ ಚಿತ್ತರಾಗದಿರಿ. ಧೈರ್ಯ ಮತ್ತು ತಾಳ್ಮೆಯಿಂದ ನಿಮ್ಮ ಕೆಲಸವನ್ನು ಮುಂದುವರಿಸಿರಿ.

20. ಅರ್ಥಾತ್- ನೀನು ಯಾವುದಾದರೂ ದೇವಿ-ದೇವತೆ ಅಥವಾ ಮಹಾಪುರುಷರ ಸನ್ನಿಧಿಯಲ್ಲಿ ಅಗೌರವ ತೋರಿರಬಹುದು. ಅದರ ಪರಿಣಾಮವನ್ನೇ ನೀನೀಗ ಅನುಭವಿಸುತ್ತಿರುವೆ. ಆದ್ದರಿಂದಲೇ ಏನೇನೋ ಅಸಂಬದ್ಧ ಮಾತನಾಡಲು ತೊಡಗಿರುವೆ. ನಿನ್ನೆಯ ತನಕ ನೀನು ಘನತೆ ಗೌರವಗಳೊಂದಿಗೆ ವಾಸಿಸುತ್ತಿದ್ದ ಪ್ರದೇಶಗಳಲ್ಲಿ ನಿನಗೆ ಬೈಗುಳ ಮತ್ತು ಕಲ್ಲೇಟುಗಳ ಆತಿಥ್ಯ ನೀಡಲಾಗುತ್ತಿದೆ.

55. ನೀವೆಲ್ಲರೂ ಸೇರಿ ನನ್ನ ವಿರುದ್ಧ ಕಾರ್ಯಾಚರಣೆಯಲ್ಲಿ ಯಾವುದೇ ಕೊರತೆ ಮಾಡಬೇಡಿರಿ ಮತ್ತು ನನಗೆ ಕಿಂಚಿತ್ತೂ ಕಾಲಾವಕಾಶ ಕೊಡಬೇಡಿರಿ.

مِنْ دُوْنِهٖ فَكِيْدُوْنِيْ جَمِيْعًا ثُمَّ لَا تُنْظِرُوْنِ ﴿٥٥﴾

56. ನಾನು, ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುವ ಅಲ್ಲಾಹನ ಮೇಲೆ ಭರವಸೆ ಇಟ್ಟಿದ್ದೇನೆ. ಅವನ ಕೈಯಲ್ಲಿ ಅದರ ಜುಟ್ಟಿಲ್ಲದ ಯಾವ ಜೀವಿಯೂ ಇಲ್ಲ. ನಿಶ್ಚಯವಾಗಿಯೂ ನನ್ನ ಪ್ರಭು ನೇರಮಾರ್ಗದಲ್ಲಿದ್ದಾನೆ.

اِنِّيْ تَوَكَّلْتُ عَلَى اللّٰهِ رَبِّيْ وَرَبِّكُمْ ؕ مَا
مِنْ دَآبَّةٍ اِلَّا هُوَ اٰخِذٌۢ بِنَاصِيَتِهَا ؕ اِنَّ
رَبِّيْ عَلٰى صِرَاطٍ مُّسْتَقِيْمٍ ﴿٥٦﴾

57. ನೀವು ವಿಮುಖರಾಗುವುದಾದರೆ ಆಗಿರಿ. ನಾನು ಯಾವ ಸಂದೇಶವನ್ನು ಕೊಟ್ಟು ನಿಮ್ಮ ಬಳಿಗೆ ಕಳುಹಿಸಲ್ಪಟ್ಟಿದ್ದೆನೋ ಅದನ್ನು ನಾನು ನಿಮಗೆ ತಲುಪಿಸಿಬಿಟ್ಟಿದ್ದೇನೆ. ಇನ್ನು ನನ್ನ ಪ್ರಭು ನಿಮ್ಮ ಸ್ಥಾನದಲ್ಲಿ ಇನ್ನೊಂದು ಜನಾಂಗವನ್ನು ಎಬ್ಬಿಸುವನು. ನೀವು ಅವನಿಗೆ ಯಾವ ಹಾನಿಯನ್ನೂ ಮಾಡಲಾರಿರಿ. ನಿಶ್ಚಯ ವಾಗಿಯೂ ನನ್ನ ಪ್ರಭು ಸಕಲ ವಸ್ತುಗಳ ಸಂರಕ್ಷಕನು."

فَاِنْ تَوَلَّوْا فَقَدْ اَبْلَغْتُكُمْ مَّآ اُرْسِلْتُ
بِهٖۤ اِلَيْكُمْ ؕ وَيَسْتَخْلِفُ رَبِّيْ قَوْمًا غَيْرَكُمْ ۚ
وَلَا تَضُرُّوْنَهٗ شَيْـًٔا ؕ اِنَّ رَبِّيْ عَلٰى
كُلِّ شَيْءٍ حَفِيْظٌ ﴿٥٧﴾

58. ಅನಂತರ ನಮ್ಮ ಆಜ್ಞೆ ಬಂದಾಗ ನಾವು ನಮ್ಮ ಕೃಪೆಯಿಂದ ಹೂದರನ್ನೂ ಅವರ ಮೇಲೆ ವಿಶ್ವಾಸವಿರಿಸಿದವರನ್ನೂ ರಕ್ಷಿಸಿದೆವು ಮತ್ತು ಒಂದು ಕಠಿಣ ಶಿಕ್ಷೆಯಿಂದ ಅವರನ್ನು ಪಾರುಗೊಳಿಸಿದೆವು.

وَلَمَّا جَآءَ اَمْرُنَا نَجَّيْنَا هُوْدًا وَّالَّذِيْنَ
اٰمَنُوْا مَعَهٗ بِرَحْمَةٍ مِّنَّا ۚ وَنَجَّيْنٰهُمْ مِّنْ
عَذَابٍ غَلِيْظٍ ﴿٥٨﴾

59. ಇವರೇ ಆದ್ ಜನಾಂಗದವರು. ಇವರು ತಮ್ಮ ಪ್ರಭುವಿನ ನಿದರ್ಶನಗಳನ್ನು ನಿರಾಕರಿಸಿದರು, ಅವರು ರಸೂಲರನ್ನು ಧಿಕ್ಕರಿಸಿ ದರು. ಪ್ರತಿಯೊಬ್ಬ ಮದೋನ್ಮತ್ತ ಸತ್ಯ ವಿರೋಧಿಯನ್ನು ಅನುಸರಿಸುತ್ತ ಸಾಗಿದರು.

وَتِلْكَ عَادٌ ۟ۙ جَحَدُوْا بِاٰيٰتِ رَبِّهِمْ وَعَصَوْا
رُسُلَهٗ وَاتَّبَعُوْۤا اَمْرَ كُلِّ جَبَّارٍ عَنِيْدٍ ﴿٥٩﴾

60. ಕಟ್ಟಕಡೆಗೆ ಇಹಲೋಕದಲ್ಲಿಯೂ ಅವರು ಶಾಪಗ್ರಸ್ತರಾದರು ಮತ್ತು ಪುನರುತ್ಥಾನದಂದೂ ಆ ಶಾಪ ಅವರನ್ನು ಹಿಂಬಾಲಿಸು ವುದು. ಕೇಳಿರಿ! ಆದ್ ಜನಾಂಗವು ತನ್ನ ಪ್ರಭುವನ್ನು ನಿರಾಕರಿಸಿತು. ಕೇಳಿರಿ! ಹೂದ್‌ರ ಜನಾಂಗದವರಾದ ಆದ್ ದೂರಕ್ಕೆ ಎಸೆಯಲ್ಪಟ್ಟರು.

وَاُتْبِعُوْا فِيْ هٰذِهِ الدُّنْيَا لَعْنَةً وَّيَوْمَ
الْقِيٰمَةِ ؕ اَلَاۤ اِنَّ عَادًا كَفَرُوْا رَبَّهُمْ ؕ
اَلَا بُعْدًا لِّعَادٍ قَوْمِ هُوْدٍ ﴿٦٠﴾ ع

61. ನಾವು ಸಮೂದರ ಕಡೆಗೆ ಅವರ ಬಂಧು ಸಾಲಿಹರನ್ನು ಕಳುಹಿಸಿದೆವು. ಅವರು (ಹೀಗೆ) ಹೇಳಿದರು: "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ಇನ್ನಾರೂ ನಿಮ್ಮ ಆರಾಧ್ಯನಿಲ್ಲ. ಅವನೇ ನಿಮ್ಮನ್ನು

وَاِلٰى ثَمُوْدَ اَخَاهُمْ صٰلِحًا ۘ قَالَ يٰقَوْمِ
اعْبُدُوا اللّٰهَ مَا لَكُمْ مِّنْ اِلٰهٍ غَيْرُهٗ ؕ
هُوَ اَنْشَاَكُمْ مِّنَ الْاَرْضِ وَاسْتَعْمَرَكُمْ

ಭೂಮಿಯಿಂದ ಸೃಷ್ಟಿಸಿದನು ಮತ್ತು ಇಲ್ಲಿ ನೆಲೆಗೊಳಿಸಿದನು. ಆದುದರಿಂದ ನೀವು ಅವನೊಡನೆ ಕ್ಷಮೆ ಯಾಚಿಸಿರಿ ಮತ್ತು ಪಶ್ಚಾತ್ತಾಪ ಪಟ್ಟು ಆತನೆಡೆಗೆ ಮರಳಿರಿ. ನಿಶ್ಚಯವಾಗಿಯೂ ನನ್ನ ಪ್ರಭು ನಿಕಟನೂ ಪ್ರಾರ್ಥನೆಗಳಿಗೆ ಉತ್ತರ ಕೊಡುವವನೂ ಆಗಿರುತ್ತಾನೆ."[21]

فِيهَا فَاسْتَغْفِرُوهُ ثُمَّ تُوبُوٓا إِلَيْهِ ۚ إِنَّ رَبِّى قَرِيبٌ مُّجِيبٌ ﴿٦١﴾

62. ಅವರು ಹೀಗೆ ಹೇಳಿದರು; "ಓ ಸಾಲಿಹ್, ಇದಕ್ಕಿಂತ ಮುಂಚೆ ನಾವು ನಿಮ್ಮಿಂದ ಬಹಳಷ್ಟು ನಿರೀಕ್ಷಿಸಿದ್ದೆವು. ನಮ್ಮ ಪೂರ್ವಿಕರು ಪೂಜಿಸಿಕೊಂಡಿದ್ದವುಗಳನ್ನು ಪೂಜಿಸುವುದರಿಂದ ನೀವು ನಮ್ಮನ್ನು ತಡೆಯುತ್ತೀರಾ? ನೀವು ಯಾವ ದಾರಿಗೆ ನಮ್ಮನ್ನು ಕರೆಯು ತ್ತೀರೋ ಅದರ ಬಗ್ಗೆ ನಮಗೆ ದೊಡ್ಡ ಸಂದೇಹವಿದೆ. ಅದು ನಮ್ಮನ್ನು ಸಂಶಯಕ್ಕೊಳಪಡಿಸಿದೆ."

قَالُوا۟ يَٰصَٰلِحُ قَدْ كُنتَ فِينَا مَرْجُوًّا قَبْلَ هَٰذَآ ۖ أَتَنْهَىٰنَآ أَن نَّعْبُدَ مَا يَعْبُدُ ءَابَآؤُنَا وَإِنَّنَا لَفِى شَكٍّ مِّمَّا تَدْعُونَآ إِلَيْهِ مُرِيبٍ ﴿٦٢﴾

63. ಸಾಲಿಹ್ ಹೀಗೆಂದರು, "ಓ ನನ್ನ ಜನಾಂಗ ಬಾಂಧವರೇ, ನಾನು ನನ್ನ ಪ್ರಭುವಿನ ಕಡೆಯಿಂದ ಸುವ್ಯಕ್ತ ಪ್ರಮಾಣವನ್ನಿರಿಸಿ ಕೊಂಡಿದ್ದರೆ ಹಾಗೂ ಅವನು ತನ್ನ ಕೃಪೆಯನ್ನೂ ನನಗೆ ದಯ ಪಾಲಿಸಿದ್ದರೆ, ಆ ಬಳಿಕ ನಾನು ಅವನ ಆಜ್ಞೋಲ್ಲಂಘನೆ ಮಾಡಿ ದರೆ, ನನ್ನನ್ನು ಅಲ್ಲಾಹನ ಹಿಡಿತದಿಂದ ರಕ್ಷಿಸುವವರಾರು? ನೀವು ಇದರ ಬಗ್ಗೆ ವಿವೇಚಿಸಿದಿರಾ? ನೀವು ನನ್ನನ್ನು ಇನ್ನಷ್ಟು ನಷ್ಟಕ್ಕೆ ಗುರಿಪಡಿಸುವಿರೇ ವಿನಾ ಇನ್ನೇನು ಮಾಡಬಲ್ಲಿರಿ?

قَالَ يَٰقَوْمِ أَرَءَيْتُمْ إِن كُنتُ عَلَىٰ بَيِّنَةٍ مِّن رَّبِّى وَءَاتَىٰنِى مِنْهُ رَحْمَةً فَمَن يَنصُرُنِى مِنَ ٱللَّهِ إِنْ عَصَيْتُهُۥ ۖ فَمَا تَزِيدُونَنِى غَيْرَ تَخْسِيرٍ ﴿٦٣﴾

64. ಓ ನನ್ನ ಜನಾಂಗ ಬಾಂಧವರೇ, ಇದೋ ಅಲ್ಲಾಹನ ಈ

وَيَٰقَوْمِ هَٰذِهِۦ نَاقَةُ ٱللَّهِ لَكُمْ ءَايَةً

21. ಈ ಸಂಕ್ಷಿಪ್ತವಾದ ಸೂಕ್ತದ ಮೂಲಕ ಹ. ಸಾಲಿಹ್(ಅ) ಅವರು ಬಹುದೇವಾರಾಧನೆಯ ಎಲ್ಲಾ ವ್ಯವಹಾರಗಳ ಬುಡವನ್ನೇ ಕಿತ್ತೆಸೆದಿದ್ದಾರೆ. ಸರ್ವಲೋಕ ಪರಿಪಾಲಕನ ಪವಿತ್ರ ಸನ್ನಿಧಿ ಜನಸಾಮಾನ್ಯರಿಗೆ ಎಟುಕುವುದಿಲ್ಲ ಎಂದು ಬಹುದೇವಾರಾಧಕರು ಭಾವಿಸುತ್ತಾರೆ. ಕೆಲವು ಚಾಣಾಕ್ಷಮತಿಗಳು ಆ ರೀತಿಯ ಭಾವನೆಯನ್ನು ಮೂಡಿಸಲು ಪ್ರಯತ್ನಿಸಿದ್ದಾರೆ ಕೂಡ. ಅವನ ಸನ್ನಿಧಿಗೆ ಸಾಮಾನ್ಯ ವ್ಯಕ್ತಿಯೊಬ್ಬ ಹೇಗೆ ತಲಪಿಯಾನು. ಪವಿತ್ರ ಆತ್ಮಗಳ ಮಧ್ಯಸ್ಥಿಕೆ ಇಲ್ಲದೆ ಅಥವಾ ಬಲಿ, ಹರಕೆ ಮತ್ತು ಬೇಡಿಕೆಗಳನ್ನು ಮೇಲಿನ ತನಕ ತಲಪಿಸುವ ತಂತ್ರವನ್ನು ಬಲ್ಲ ಧರ್ಮದ ಪೀಠಾಧಿಪತಿಗಳ ನೆರವು ಪಡೆಯದೆ ದೇವ ಸನ್ನಿಧಿಗೆ ಪ್ರಾರ್ಥನೆ ತಲಪಿ ಅಲ್ಲಿಂದ ಉತ್ತರ ದೊರೆಯಲು ಯಾವ ರೀತಿಯಿಂದಲೂ ಸಾಧ್ಯವಲ್ಲ ಎಂದು ಮಂದಟ್ಟು ಮಾಡಿಸಲು ಅವರು ಪ್ರಯತ್ನಿಸಿದ್ದಾರೆ. ಇಂತಹ ತಪ್ಪುಕಲ್ಪನೆಗಳೇ ದಾಸ ಮತ್ತು ದೇವನ ನಡುವೆ ಸಣ್ಣ ದೊಡ್ಡ ಆರಾಧ್ಯರುಗಳು ಮತ್ತು ಶಿಫಾರಸುದಾರರ ಒಂದು ದೊಡ್ಡ ಕೂಟವನ್ನೇ ನಿರ್ಮಿಸಿವೆ. ಹ. ಸಾಲಿಹ್(ಅ) ಅಜ್ಞಾನಜನ್ಯವಾದ ಈ ಮಾಯಾಜಾಲವನ್ನು ಎರಡೇ ಮಾತುಗಳ ಮೂಲಕ ಕಡಿದು ಹಾಕುತ್ತಾರೆ. ಮೊದಲನೆಯದಾಗಿ, ಅಲ್ಲಾಹನು ಸಮೀಪವಿದ್ದಾನೆ. ಅರ್ಥಾತ್ ಅವನು ನಿಮ್ಮಿಂದ ದೂರದಲ್ಲಿದ್ದಾನೆ ಎಂಬ ನಿಮ್ಮ ಭಾವನೆ ತಪ್ಪಾಗಿದೆ. ಹಾಗೆಯೇ ನೇರವಾಗಿ ಅವನನ್ನು ಕರೆದು ನಿಮ್ಮ ಪ್ರಾರ್ಥನೆಗಳಿಗೆ ಉತ್ತರವನ್ನು ಪಡೆಯಲಾರಿರಿ ಎಂಬ ನಿಮ್ಮ ಭಾವನೆಯೂ ಸರಿಯಲ್ಲ. ನಿಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಬಳಿಯೇ ದೇವನನ್ನು ಪಡೆಯಬಹುದು. ಅವನೊಡನೆ ಮೊರೆಯಿಡಬಹುದು. ತನ್ನ ಬೇಡಿಕೆಗಳನ್ನು ನೇರವಾಗಿ ಅವನ ಮುಂದಿರಿಸಬಹುದು. ಪ್ರತಿಯೋರ್ವ ದಾಸನ ಪ್ರಾರ್ಥನೆಗೂ ಅವನು ಸ್ವತಃ ಉತ್ತರವೀಯುತ್ತಾನೆ. ವಿಶ್ವದೊಡೆಯನ ಸನ್ನಿಧಿ ಪ್ರತಿಯೊಬ್ಬನ ಪಾಲಿಗೂ ತೆರೆದಿರುವಾಗ ಮತ್ತು ಅದು ಪ್ರತಿಯೊಬ್ಬನಿಗೂ ಹತ್ತಿರದಲ್ಲಿರುವಾಗ ನೀವೇಕೆ ಅಜ್ಞಾನದಲ್ಲಿ ಬಿದ್ದುಕೊಂಡಿರುವಿರಿ ಮತ್ತು ಮಧ್ಯವರ್ತಿಗಳನ್ನೂ ಶಿಫಾರಸುದಾರರನ್ನೂ ಹುಡುಕುತ್ತಾ ಯಾಕೆ ತಿರುಗುತ್ತಿರುವಿರಿ.

ಒಂಟೆಯು ನಿಮಗೊಂದು ನಿದರ್ಶನವಾಗಿದೆ. ಇದನ್ನು ಅಲ್ಲಾಹನ ಭೂಮಿಯಲ್ಲಿ ಸ್ವತಂತ್ರವಾಗಿ ಮೇಯಲು ಬಿಡಿರಿ. ದುರುದ್ದೇಶ ಪೂರ್ವಕವಾಗಿ ಅದನ್ನು ಸಮೀಪಿಸಬೇಡಿರಿ. ಅನ್ಯಥಾ ಕೂಡಲೇ ನಿಮ್ಮ ಮೇಲೆ ಅಲ್ಲಾಹನ ಯಾತನೆ ಎರಗಿ ಬಿಡುವುದು."

فَذَرُوهَا تَأْكُلْ فِيٓ أَرْضِ اللّٰهِ وَلَا
تَمَسُّوهَا بِسُوٓءٍ فَيَأْخُذَكُمْ عَذَابٌ قَرِيبٌ ﴿٦٤﴾

65. ಆದರೆ ಅವರು ಅದನ್ನು ಕೊಂದು ಹಾಕಿದರು. ಆಗ ಸಾಲಿಹ್‌ರು ಅವರಿಗೆ, "ನೀವಿನ್ನು ಬರೇ ಮೂರು ದಿನಗಳ ತನಕ ನಿಮ್ಮ ಮನೆಗಳಲ್ಲಿ ಸುಖೋಪಭೋಗಗಳೊಂದಿಗೆ ವಾಸಿಸಿರಿ. ಇದು ಸುಳ್ಳಾಗದಂತಹ ವಾಗ್ದಾನಾವಧಿ" ಎಂದು ಅವರಿಗೆ ಎಚ್ಚರಿಸಿದರು.

فَعَقَرُوهَا فَقَالَ تَمَتَّعُوا فِي دَارِكُمْ ثَلٰثَةَ
أَيَّامٍ ۖ ذٰلِكَ وَعْدٌ غَيْرُ مَكْذُوبٍ ﴿٦٥﴾

66. ಕೊನೆಗೆ ನಮ್ಮ ತೀರ್ಮಾನದ ಸಮಯ ಬಂದೊಡನೆ ನಾವು ನಮ್ಮ ಕೃಪೆಯಿಂದ ಸಾಲಿಹರನ್ನೂ ಅವರ ಮೇಲೆ ವಿಶ್ವಾಸ ವಿಟ್ಟವರನ್ನೂ ರಕ್ಷಿಸಿದೆವು ಮತ್ತು ಆ ದಿನದ ಅಪಮಾನದಿಂದ ಅವರನ್ನು ಕಾಪಾಡಿದೆವು. ನಿಶ್ಚಯವಾಗಿಯೂ ನಿಮ್ಮ ಪ್ರಭುವೇ ಪ್ರಬಲನೂ ಅಜೇಯನೂ ಆಗಿರುತ್ತಾನೆ.

فَلَمَّا جَآءَ أَمْرُنَا نَجَّيْنَا صٰلِحًا وَالَّذِينَ
ءَامَنُوا مَعَهُ بِرَحْمَةٍ مِّنَّا وَمِنْ خِزْيِ
يَوْمِئِذٍ ۗ إِنَّ رَبَّكَ هُوَ الْقَوِيُّ الْعَزِيزُ ﴿٦٦﴾

67. ಅಕ್ರಮವೆಸಗಿದವರನ್ನು ಒಂದು ಮಹಾ ಸ್ಫೋಟವು ಆವರಿಸಿತು ಮತ್ತು ಅವರು ಹಿಂದೆಂದೂ ಅಲ್ಲಿ ವಾಸಿಸಿರಲೇ ಇಲ್ಲವೋ ಎಂಬಂತೆ ನಿಶ್ಚಲರಾಗಿ ಇದ್ದಲ್ಲೇ ಸತ್ತುಬಿದ್ದರು.

وَأَخَذَ الَّذِينَ ظَلَمُوا الصَّيْحَةُ فَأَصْبَحُوا
فِي دِيَارِهِمْ جٰثِمِينَ ﴿٦٧﴾

68. ಕೇಳಿರಿ! ಸಮೂದರು ತಮ್ಮ ಪ್ರಭುವನ್ನು ನಿಷೇಧಿಸಿದರು. ಕೇಳಿರಿ! ಸಮೂದ್ ಕಿತ್ತೆಸೆಯಲ್ಪಟ್ಟರು.

كَأَن لَّمْ يَغْنَوْا فِيهَا ۗ أَلَآ إِنَّ ثَمُودَا۟ كَفَرُوا
رَبَّهُمْ ۗ أَلَا بُعْدًا لِّثَمُودَ ﴿٦٨﴾

69. ನಮ್ಮ ದೂತರು (ದೇವಚರರು) ಇಬ್‌ರಾಹೀಮರ ಬಳಿ ಸುವಾರ್ತೆಯೊಂದಿಗೆ ಬಂದರು. ನಿಮಗೆ ಸಲಾಮ್ ಎಂದರು. ಇಬ್‌ರಾಹೀಮರು ನಿಮಗೂ ಸಲಾಮ್ ಎಂದರು. ತರುವಾಯ ಅವರು ತುಸು ಹೊತ್ತಿನಲ್ಲೇ ಒಂದು ಹುರಿದ ಕರುವನ್ನು ತಂದು ಅವರ ಭೋಜನಕ್ಕಾಗಿ ಮುಂದಿಟ್ಟರು.[22]

وَلَقَدْ جَآءَتْ رُسُلُنَآ إِبْرٰهِيمَ بِالْبُشْرٰى
قَالُوا سَلٰمًا ۖ قَالَ سَلٰمٌ ۖ فَمَا لَبِثَ أَن
جَآءَ بِعِجْلٍ حَنِيذٍ ﴿٦٩﴾

70. ಆದರೆ ಅವರ ಕೈಗಳು ಆಹಾರದ ಕಡೆಗೆ ಚಲಿಸದಿರುವುದನ್ನು ಕಂಡಾಗ[23] ಅವರು ಅತಿಥಿಗಳ ಬಗ್ಗೆ ಸಂದೇಹಕ್ಕೊಳಗಾದರು

فَلَمَّا رَءَآ أَيْدِيَهُمْ لَا تَصِلُ إِلَيْهِ
نَكِرَهُمْ وَأَوْجَسَ مِنْهُمْ خِيفَةً ۚ قَالُوا

22. ದೇವಚರರು ಹ. ಇಬ್‌ರಾಹೀಮ್‌ರ(ಅ) ಬಳಿಗೆ ಮಾನವರ ರೂಪದಲ್ಲಿ ತಲಪಿದ್ದರು ಎಂದು ಇದರಿಂದ ವ್ಯಕ್ತವಾಗುತ್ತದೆ. ಮೊದಲು ಅವರು ತಮ್ಮನ್ನು ಪರಿಚಯಪಡಿಸಿಕೊಳ್ಳಲಿಲ್ಲ. ಆದ್ದರಿಂದ ಇಬ್‌ರಾಹೀಮ್(ಅ) ಇವರು ಅಪರಿಚಿತ ಅತಿಥಿಗಳಾಗಿರಬಹುದು ಎಂದು ಭಾವಿಸಿ, ಬಂದ ಕೂಡಲೇ ಅವರಿಗೆ ಆತಿಥ್ಯದ ವ್ಯವಸ್ಥೆ ಮಾಡಿದರು.

23. ಇದರಿಂದ ಇಬ್‌ರಾಹೀಮ್‌ರಿಗೆ(ಅ) ಇವರು ದೇವಚರರಾಗಿದ್ದಾರೆ ಎಂದು ತಿಳಿಯಿತು.

ಮತ್ತು ಮನಸ್ಸಿನೊಳಗೇ ಅವರ ಬಗ್ಗೆ ಹೆದರಿದರು. ಅವರು ಹೀಗೆಂದರು; "ಹೆದರಬೇಡಿರಿ, ನಾವು ಲೂತರ ಜನಾಂಗದ ಕಡೆಗೆ ಕಳುಹಿಸಲ್ಪಟ್ಟವರು."

لَا تَخَفْ إِنَّآ أُرْسِلْنَآ إِلَىٰ قَوْمِ لُوْطٍ ۝٧٠

71. ಇಬ್‌ರಾಹೀಮರ ಪತ್ನಿಯೂ (ಅಲ್ಲೇ) ನಿಂತಿದ್ದರು. ಅವರು ಇದನ್ನು ಕೇಳಿ ನಕ್ಕು ಬಿಟ್ಟರು. ಅನಂತರ ನಾವು ಆಕೆಗೆ ಇಸ್‌ಹಾಕ್ ಮತ್ತು ಇಸ್‌ಹಾಕರ ತರುವಾಯ ಯಅ್‌ಕೂಬರ ಬಗೆಗೂ ಸುವಾರ್ತೆ ನೀಡಿದೆವು.

وَامْرَأَتُهٗ قَآئِمَةٌ فَضَحِكَتْ فَبَشَّرْنٰهَا بِإِسْحٰقَ ۙ وَمِنْ وَّرَآءِ إِسْحٰقَ يَعْقُوْبَ ۝٧١

72. ಅವರು (ಅರ್ಥಾತ್ ಇಬ್‌ರಾಹೀಮರ ಪತ್ನಿ) ಹೇಳಿದರು: "ಅಕಟ! ನನ್ನ ದೌರ್ಭಾಗ್ಯವೇ,[24] ನಾನು ಹಣ್ಣು ಮುದುಕಿಯೂ ನನ್ನ ಪತಿ ಅತಿ ವೃದ್ಧರೂ ಆಗಿರುವಾಗ ನನ್ನಲ್ಲಿ ಮಕ್ಕಳಾಗುವವರೇ? ಇದಂತು ಅತ್ಯಂತ ಸೋಜಿಗದ ವಿಷಯ!"

قَالَتْ يٰوَيْلَتٰىٓ ءَأَلِدُ وَأَنَا عَجُوْزٌ وَّهٰذَا بَعْلِىْ شَيْخًا ۭ إِنَّ هٰذَا لَشَىْءٌ عَجِيْبٌ ۝٧٢

73. ದೇವಚರರು, "ಅಲ್ಲಾಹನ ಆಜ್ಞೆಯ ಬಗ್ಗೆ ಆಶ್ಚರ್ಯಪಡುತ್ತೀರಾ? ಓ ಇಬ್‌ರಾಹೀಮರ ಮನೆಯವರೇ, ನಿಮ್ಮ ಮೇಲೆ ಅಲ್ಲಾಹನ ದಯೆ ಮತ್ತು ಸಮೃದ್ಧಿಗಳಿವೆ. ನಿಜವಾಗಿಯೂ ಅಲ್ಲಾಹನು ಅತ್ಯಧಿಕ ಸ್ತುತ್ಯರ್ಹನೂ ಮಹಿಮಾವಂತನೂ ಆಗಿರುತ್ತಾನೆ" ಎಂದು ಹೇಳಿದರು.

قَالُوْٓا أَتَعْجَبِيْنَ مِنْ أَمْرِ اللّٰهِ رَحْمَتُ اللّٰهِ وَبَرَكٰتُهٗ عَلَيْكُمْ أَهْلَ الْبَيْتِ ۭ إِنَّهٗ حَمِيْدٌ مَّجِيْدٌ ۝٧٣

74. ಹೀಗೆ ಇಬ್‌ರಾಹೀಮರ ಭಯ ನೀಗಿದಾಗ ಮತ್ತು (ಸಂತತಿ ಯುಂಟಾಗಬಹುದೆಂಬ ಶುಭವಾರ್ತೆಯಿಂದ) ಅವರಿಗೆ ಸಂತೋಷವಾದಾಗ ಅವರು ನಮ್ಮೊಡನೆ ಲೂತ್ ಜನಾಂಗದ ಕುರಿತು 'ಜಗಳ' ಆರಂಭಿಸಿದರು.[25]

فَلَمَّا ذَهَبَ عَنْ إِبْرٰهِيْمَ الرَّوْعُ وَجَآءَتْهُ الْبُشْرٰى يُجَادِلُنَا فِىْ قَوْمِ لُوْطٍ ۝٧٤

75. ವಾಸ್ತವದಲ್ಲಿ ಇಬ್‌ರಾಹೀಮರು ಸಹನಶೀಲರೂ ಕೋಮಲ ಹೃದಯಿಯೂ ಎಲ್ಲ ಸ್ಥಿತಿಗಳಲ್ಲೂ ನಮ್ಮ ಕಡೆಗೆ ಒಲಿಯುವವರೂ ಆಗಿದ್ದರು.

إِنَّ إِبْرٰهِيْمَ لَحَلِيْمٌ أَوّٰهٌ مُّنِيْبٌ ۝٧٥

24. ಹ. ಸಾರ ಈ ಬಗ್ಗೆ ಸಂತುಷ್ಟರಾಗುವ ಬದಲು ಇದನ್ನು ತನ್ನ ದೌರ್ಭಾಗ್ಯವೆಂದು ಭಾವಿಸಿದ್ದರೆಂದು ಇದರರ್ಥವಲ್ಲ. ಬದಲಾಗಿ ಇದು ಮಹಿಳೆಯರು ಸಾಮಾನ್ಯವಾಗಿ ಆಶ್ಚರ್ಯದ ವೇಳೆ ಹೇಳುವ ಶಬ್ದವಾಗಿದೆ.

25. ಜಗಳ ಎಂಬ ಪದ ಇಲ್ಲಿ ಹ. ಇಬ್‌ರಾಹೀಮ್(ಅ) ತಮ್ಮ ಪ್ರಭುವಿನೊಂದಿಗೆ ಹೊಂದಿದ್ದ ಅತೀವ ಪ್ರೀತ್ಯಾದರದ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ದೇವ ಮತ್ತು ದಾಸನ ನಡುವೆ ಬಹಳ ಹೊತ್ತಿನ ತನಕ ಮಾತುಕತೆ ಜಾರಿಯಲ್ಲಿರುತ್ತದೆಂಬ ಚಿತ್ರಣ ಈ ಪದದಿಂದ ನಮ್ಮ ಕಣ್ಣಿಗೆ ಕಟ್ಟುತ್ತದೆ. ಹೇಗಾದರೂ ಲೂತ್ ಸಮುದಾಯವನ್ನು ಯಾತನೆಯಿಂದ ಪಾರು ಗೊಳಿಸಬೇಕೆಂದು ದಾಸ ಒತ್ತಾಯಪಡಿಸುತ್ತಾನೆ. ಅದಕ್ಕುತ್ತರವಾಗಿ ದೇವನು, ಈ ಸಮುದಾಯ ಒಳಿತಿನಿಂದ ಸಂಪೂರ್ಣ ಮುಕ್ತವಾಗಿದೆ, ಅವರೊಂದಿಗೆ ಯಾವುದೇ ರೀತಿಯ ರಿಯಾಯಿತಿ ಮಾಡಲಾಗದಷ್ಟು ಅವರ ಅಪರಾಧಗಳು ಹೆಚ್ಚಿವೆ ಎಂದು ಹೇಳುತ್ತಾನೆ. ಆದರೆ ದಾಸನೆಂಬ ನೆಲೆಯಲ್ಲಿ ಅವನು ಮತ್ತೆ ಮತ್ತೆ ಅದನ್ನೇ ಹೇಳುತ್ತಾನೆ, "ಪ್ರಭೂ! ಕಿಂಚಿತ್ತಾದರೂ ಒಳಿತು ಅವರಲ್ಲಿ ಬಾಕಿಯುಳಿದಿದ್ದರೆ ಅವರಿಗೆ ಸ್ವಲ್ಪ ಕಾಲಾವಕಾಶವನ್ನು ಕೊಟ್ಟುಬಿಡು. ಅವರ ಒಳಿತು ಫಲ ನೀಡಲೂ ಬಹುದು."

76. (ಕೊನೆಗೆ ನಮ್ಮ ದೇವಚರರು ಅವರೊಡನೆ ಹೇಳಿದರು:) "ಓ ಇಬ್‌ರಾಹೀಮರೇ, ಇನ್ನು ವಾದಿಸಬೇಡಿರಿ. ನಿಶ್ಚಯವಾಗಿಯೂ ನಿಮ್ಮ ಪ್ರಭುವಿನ ಅಪ್ಪಣೆ ಆಗಿ ಹೋಗಿದೆ. ಇನ್ನು ಅವರ ಮೇಲೆ ಯಾರಿಂದಲೂ ನೀಗಿಸಲಾಗದಂತಹ ಯಾತನೆ ಬಂದೇ ತೀರುವುದು.

يَٰٓإِبْرَٰهِيمُ أَعْرِضْ عَنْ هَٰذَآ ۖ إِنَّهُۥ قَدْ جَآءَ أَمْرُ رَبِّكَ ۖ وَإِنَّهُمْ ءَاتِيهِمْ عَذَابٌ غَيْرُ مَرْدُودٍ ﴿٧٦﴾

77. ದೇವಚರರು 'ಲೂತ'ರ ಬಳಿಗೆ ಬಂದಾಗ ಅವರ ಆಗಮನದಿಂದ ಅವರು ತುಂಬಾ ಗಾಬರಿಗೊಂಡರು ಮತ್ತು ಅವರ ಮನಸ್ಸು ಕುಗ್ಗಿತು. ಇಂದು ಮಹಾ ಗಂಡಾಂತರದ ದಿನವೆಂದರು.[26]

وَلَمَّا جَآءَتْ رُسُلُنَا لُوطًا سِىٓءَ بِهِمْ وَضَاقَ بِهِمْ ذَرْعًا وَقَالَ هَٰذَا يَوْمٌ عَصِيبٌ ﴿٧٧﴾

78. (ಈ ಅತಿಥಿಗಳು ಬಂದೊಡನೆ) ಅವರ ಜನಾಂಗದವರು ಸ್ವಚ್ಛಂದವಾಗಿ ಅವರ ಮನೆಯ ಕಡೆಗೆ ಧಾವಿಸಿ ಬಂದರು. ಅವರು ಮುಂಚಿನಿಂದಲೇ ಇಂತಹ ದುಶ್ಚಟವಿದ್ದವರಾಗಿದ್ದರು. ಅವರೊಡನೆ ಲೂತ್ ಹೀಗೆಂದರು, "ಓ ನನ್ನ ಜನಾಂಗದವರೇ, ಇದೋ ನನ್ನ ಪುತ್ರಿಯರಿದ್ದಾರೆ. ಇವರು ನಿಮಗೆ ಅಧಿಕ ಪವಿತ್ರರು.[27] ಅಲ್ಲಾಹನನ್ನು ಒಂದಿಷ್ಟು ಭಯಪಡಿರಿ. ನನ್ನ ಅತಿಥಿಗಳ ಬಗ್ಗೆ ನನ್ನನ್ನು ಅಪಮಾನಗೊಳಿಸಬೇಡಿರಿ. ನಿಮ್ಮಲ್ಲಿ ಸಜ್ಜನನಾರೂ ಇಲ್ಲವೇ?"

وَجَآءَهُۥ قَوْمُهُۥ يُهْرَعُونَ إِلَيْهِ وَمِن قَبْلُ كَانُوا۟ يَعْمَلُونَ ٱلسَّيِّـَٔاتِ ۚ قَالَ يَٰقَوْمِ هَٰٓؤُلَآءِ بَنَاتِى هُنَّ أَطْهَرُ لَكُمْ ۖ فَٱتَّقُوا۟ ٱللَّهَ وَلَا تُخْزُونِ فِى ضَيْفِىٓ ۖ أَلَيْسَ مِنكُمْ رَجُلٌ رَّشِيدٌ ﴿٧٨﴾

79. ಅವರು (ಈ ರೀತಿ) ಉತ್ತರಿಸಿದರು, "ನಿಮ್ಮ ಪುತ್ರಿಯರಲ್ಲಿ ನಮಗೇನೂ ಹಕ್ಕಿಲ್ಲವೆಂಬುದು ನಿಮಗೆ ಗೊತ್ತೇ ಇದೆ. ನಾವು ಇಚ್ಛಿಸುವುದೇನೆಂಬುದೂ ನಿಮಗೆ ತಿಳಿದಿದೆ."

قَالُوا۟ لَقَدْ عَلِمْتَ مَا لَنَا فِى بَنَاتِكَ مِنْ حَقٍّ وَإِنَّكَ لَتَعْلَمُ مَا نُرِيدُ ﴿٧٩﴾

80. ಲೂತ್ ಹೇಳಿದರು: "ಅಕಟಃ ನಿಮ್ಮನ್ನು ತಡೆಯುವ ಶಕ್ತಿ ನನಗಿರುತ್ತಿದ್ದರೆ! ಅಥವಾ ನನಗೆ ಅಭಯ ಪಡೆಯಲು ಬಲವಾದ ಆಶ್ರಯವೇನಾದರೂ ಇರುತ್ತಿದ್ದರೆ!"

قَالَ لَوْ أَنَّ لِى بِكُمْ قُوَّةً أَوْ ءَاوِىٓ إِلَىٰ رُكْنٍ شَدِيدٍ ﴿٨٠﴾

26. ಈ ದೇವಚರರು ಸ್ಫುರದ್ರೂಪಿ ಬಾಲಕರ ರೂಪದಲ್ಲಿ ಹ. ಲೂತ್‌ರ(ಅ) ಬಳಿ ಬಂದಿದ್ದರು. ಇವರು ದೇವಚರರಾಗಿದ್ದಾರೆಂದು ಅವರಿಗೆ ತಿಳಿದಿರಲಿಲ್ಲ. ಆದ್ದರಿಂದಲೇ ಈ ಅತಿಥಿಗಳ ಆಗಮನದಿಂದ ಅವರು ತೀವ್ರ ಚಿಂತೆಗೀಡಾಗಿ ಎದೆಗುಂದಿದರು. ತನ್ನ ಸಮುದಾಯ ಎಷ್ಟು ಚಾರಿತ್ರ್ಯಹೀನ ಮತ್ತು ನಿರ್ಲಜ್ಜವಾದುದೆಂದು ಅವರಿಗೆ ತಿಳಿದಿತ್ತು.

27. ಹ. ಲೂತ್‌ರು(ಅ) ತಮ್ಮ ಪುತ್ರಿಯರನ್ನು ವ್ಯಭಿಚಾರಕ್ಕಾಗಿ ಮುಂದು ಮಾಡಿದ್ದರು ಎಂದು ಇದರ ಅರ್ಥವಲ್ಲ. "ಇವರು ನಿಮಗೆ ಅತ್ಯಂತ ಪರಿಶುದ್ಧರು" ಎಂಬ ವಾಕ್ಯ ಇಂತಹ ತಪ್ಪುಕಲ್ಪನೆಗೆ ಅವಕಾಶವನ್ನೇ ಕಲ್ಪಿಸುವುದಿಲ್ಲ. ತನ್ನ ಲೈಂಗಿಕ ಆಸಕ್ತಿಯನ್ನು ಅಲ್ಲಾಹನು ಗೊತ್ತುಪಡಿಸಿರುವ ನೈಸರ್ಗಿಕ ಮತ್ತು ಧರ್ಮಸಮ್ಮತ ವಿಧಾನದಿಂದ ಈಡೇರಿಸಿರಿ, ಅದಕ್ಕಾಗಿ ಮಹಿಳೆಯರಿಗೇನೂ ಬರವಿಲ್ಲ ಎಂಬುದು ಹ. ಲೂತ್‌ರ(ಅ) ಮಾತಿನ ಸ್ಪಷ್ಟವಾದ ಇಂಗಿತವಾಗಿತ್ತು.

81. ಆಗ ದೇವಚರರು ಅವರೊಡನೆ (ಹೀಗೆ) ಹೇಳಿದರು: "ಓ ಲೂತ್, ನಾವು ನಿಮ್ಮ ಪ್ರಭುವಿನಿಂದ ಕಳುಹಿಸಲ್ಪಟ್ಟ ದೇವಚರರಾಗಿರುತ್ತೇವೆ. ನಿಮಗೇನೂ ಕೇಡುಂಟು ಮಾಡಲು ಇವರಿಂದಾಗದು. ನೀವು ಕತ್ತಲೆ ಇರುವಾಗಲೇ ನಿಮ್ಮ ಕುಟುಂಬದವರನ್ನು ಸಂಗಡ ಕರೆದುಕೊಂಡು ಹೋಗಿಬಿಡಿರಿ. ನಿಮ್ಮಲ್ಲಿ ಯಾರೊಬ್ಬರೂ ಹಿಂದೆ ತಿರುಗಿ ನೋಡಬಾರದೆಂಬುದನ್ನು ನೆನಪಿಟ್ಟುಕೊಳ್ಳಿರಿ. ಆದರೆ ನಿಮ್ಮ ಪತ್ನಿ (ನಿಮ್ಮೊಂದಿಗೆ ಹೋಗಲಾರಳು) ಏಕೆಂದರೆ ಇವರ ಮೇಲೆ ಸಂಭವಿಸಲಿರುವುದೆಲ್ಲಾ ಅವಳ ಮೇಲೂ ಸಂಭವಿಸುವುದು. ಅವರ ವಿನಾಶಕ್ಕಾಗಿ ಪ್ರಾತಃಕಾಲವು ನಿಶ್ಚಯಿಸಲ್ಪಟ್ಟಿದೆ. ಇನ್ನು ಬೆಳಗಾಗಲು ಸಮಯವೇ ಎಷ್ಟಿದೆ!"

قَالُوْا يٰلُوْطُ اِنَّا رُسُلُ رَبِّكَ لَنْ يَّصِلُوْٓا اِلَيْكَ فَاَسْرِ بِاَهْلِكَ بِقِطْعٍ مِّنَ الَّيْلِ وَلَا يَلْتَفِتْ مِنْكُمْ اَحَدٌ اِلَّا امْرَاَتَكَ ؕ اِنَّهٗ مُصِيْبُهَا مَآ اَصَابَهُمْ ؕ اِنَّ مَوْعِدَهُمُ الصُّبْحُ ؕ اَلَيْسَ الصُّبْحُ بِقَرِيْبٍ ﴿٨١﴾

82. ಹೀಗೆ ನಮ್ಮ ತೀರ್ಮಾನದ ಸಮಯ ಬಂದಾಗ ನಾವು ಆ ನಾಡನ್ನು ಬುಡಮೇಲು ಮಾಡಿ ಬಿಟ್ಟೆವು ಮತ್ತು ಅದರ ಮೇಲೆ ಸುಟ್ಟ ಕಲ್ಲುಗಳನ್ನು ಎಡೆಬಿಡದೆ ಸುರಿಸಿದೆವು.

فَلَمَّا جَآءَ اَمْرُنَا جَعَلْنَا عَالِيَهَا سَافِلَهَا وَاَمْطَرْنَا عَلَيْهَا حِجَارَةً مِّنْ سِجِّيْلٍ ۬ۙ مَّنْضُوْدٍ ﴿٨٢﴾

83. ಅವುಗಳ ಪೈಕಿ ಪ್ರತಿಯೊಂದು ಕಲ್ಲೂ ನಿಮ್ಮ ಪ್ರಭುವಿನ ಬಳಿ ಗುರುತಿಸಲ್ಪಟ್ಟಿತ್ತು.[28] ಈ ಶಿಕ್ಷೆಯು ಅಕ್ರಮಿಗಳಿಂದ ದೂರವಿಲ್ಲ.

مُّسَوَّمَةً عِنْدَ رَبِّكَ ؕ وَمَا هِيَ مِنَ الظّٰلِمِيْنَ بِبَعِيْدٍ ﴿٨٣﴾ ع

84. ನಾವು 'ಮದ್‌ಯನ್'ನವರ ಕಡೆಗೆ ಅವರ ಬಂಧು ಶುಐಬರನ್ನು ಕಳುಹಿಸಿದೆವು. ಅವರು (ಹೀಗೆ) ಹೇಳಿದರು: "ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ಇನ್ನಾರೂ ನಿಮ್ಮ ಆರಾಧ್ಯನಿಲ್ಲ. ನೀವು ಅಳತೆ ಮತ್ತು ತೂಕದಲ್ಲಿ ಕಡಿಮೆ ಮಾಡಬೇಡಿರಿ. ಇಂದು ನಾನು ನಿಮ್ಮನ್ನು ಉತ್ತಮ ಸ್ಥಿತಿಯಲ್ಲಿ ಕಾಣುತ್ತಿದ್ದೇನೆ. ಆದರೆ ನಾಳೆ ನಿಮ್ಮ ಮೇಲೆ, ಎಲ್ಲರನ್ನೂ ಆವರಿಸಿಕೊಳ್ಳುವ ಯಾತನೆಯ ದಿನವೊಂದು ಬರಲಿರುವ ವಿಷಯದಲ್ಲಿ ನಾನು ಭಯಪಡುತ್ತೇನೆ.

وَاِلٰى مَدْيَنَ اَخَاهُمْ شُعَيْبًا ؕ قَالَ يٰقَوْمِ اعْبُدُوا اللّٰهَ مَا لَكُمْ مِّنْ اِلٰهٍ غَيْرُهٗ ؕ وَلَا تَنْقُصُوا الْمِكْيَالَ وَالْمِيْزَانَ اِنِّيْٓ اَرٰىكُمْ بِخَيْرٍ وَّاِنِّيْٓ اَخَافُ عَلَيْكُمْ عَذَابَ يَوْمٍ مُّحِيْطٍ ﴿٨٤﴾

85. ಓ ನನ್ನ ಜನಾಂಗ ಬಾಂಧವರೇ, ನ್ಯಾಯದೊಂದಿಗೆ ಪೂರ್ತಿಯಾಗಿ ಅಳತೆ ಮತ್ತು ತೂಕ ಮಾಡಿಕೊಡಿರಿ. ಜನರಿಗೆ ಅವರ ವಸ್ತುಗಳನ್ನು ಕಡಿಮೆ ಮಾಡಿಕೊಡಬೇಡಿರಿ ಮತ್ತು ಭೂಮಿಯಲ್ಲಿ ಕ್ಷೋಭೆ ಹರಡುತ್ತ ನಡೆಯಬೇಡಿರಿ.

وَيٰقَوْمِ اَوْفُوا الْمِكْيَالَ وَالْمِيْزَانَ بِالْقِسْطِ وَلَا تَبْخَسُوا النَّاسَ اَشْيَآءَهُمْ وَلَا تَعْثَوْا فِى الْاَرْضِ مُفْسِدِيْنَ ﴿٨٥﴾

28. ಅರ್ಥಾತ್- ಪ್ರತಿಯೊಂದು ಕಲ್ಲಿಗೂ ಅದು ಎಂತಹ ವಿನಾಶವನ್ನೆಸಗಬೇಕು ಮತ್ತು ಯಾವ ಕಲ್ಲು ಯಾವ ಅಪರಾಧಿಯ ಮೇಲೆ ಬೀಳಬೇಕು ಎಂದು ಅಲ್ಲಾಹನು ಗೊತ್ತುಪಡಿಸಿದ್ದನು.

86. ನೀವು ಸತ್ಯವಿಶ್ವಾಸಿಗಳಾಗಿರುವಿರಾದರೆ ಅಲ್ಲಾಹನು ನೀಡಿದ ಉಳಿತಾಯವೇ ನಿಮಗೆ ಉತ್ತಮ. ಅಂತು ನಾನೇನೂ ನಿಮ್ಮ ಮೇಲ್ನೋಟಗಾರನಲ್ಲ."

بَقِيَّتُ اللّٰهِ خَيْرٌ لَّكُمْ اِنْ كُنْتُمْ مُّؤْمِنِيْنَ ۚ۬ وَمَآ اَنَا عَلَيْكُمْ بِحَفِيْظٍ ﴿۸۶﴾

87. ಅವರು ಉತ್ತರವಿತ್ತರು, "ಓ ಶುಐಬ್, ನಾವು ನಮ್ಮ ಪೂರ್ವಿಕರು ಆರಾಧಿಸುತ್ತಿದ್ದ ಆರಾಧ್ಯರನ್ನೆಲ್ಲಾ ತ್ಯಜಿಸಬೇಕೆಂದಾಗಲಿ, ನಮ್ಮ ಸೊತ್ತುಗಳನ್ನೂ ನಮಗೆ ಸರಿ ಕಂಡಂತೆ ಬಳಸುವ ಅಧಿಕಾರ ವಿಲ್ಲವೆಂದಾಗಲಿ ನಿನ್ನ ನಮಾಝ್ ನಿನಗೆ ಆಜ್ಞಾಪಿಸುತ್ತಿದೆಯೇ ನೀನೊಬ್ಬನು ಮಾತ್ರ ಮಹಾ ಸೌಜನ್ಯಶೀಲನೂ ಸನ್ಮಾರ್ಗನಿಷ್ಠನೂ ಆಗಿಬಿಟ್ಟಿರುವೆ!"

قَالُوْا يٰشُعَيْبُ اَصَلٰوتُكَ تَاْمُرُكَ اَنْ نَّتْرُكَ مَا يَعْبُدُ اٰبَآؤُنَآ اَوْ اَنْ نَّفْعَلَ فِيْٓ اَمْوَالِنَا مَا نَشٰٓؤُا ؕ اِنَّكَ لَاَنْتَ الْحَلِيْمُ الرَّشِيْدُ ﴿۸۷﴾

88. ಶುಐಬ್ (ಹೀಗೆ) ಹೇಳಿದರು: "ಓ ನನ್ನ ಜನಾಂಗ ಬಾಂಧವರೇ, ನೀವೇ ವಿವೇಚಿಸಿರಿ, ನಾನು ನನ್ನ ಪ್ರಭುವಿನ ಕಡೆಯಿಂದ ಒಂದು ಸುಸ್ಪಷ್ಟ ಪ್ರಮಾಣದಲ್ಲಿದ್ದರೆ ಹಾಗೂ ಅವನು ನನಗೆ ತನ್ನ ಕಡೆಯಿಂದ ಉತ್ತಮ ಜೀವನಾಧಾರವನ್ನೂ ದಯಪಾಲಿಸಿದ್ದರೆ,[29] (ಅನಂತರವೂ ನಾನು ನಿಮ್ಮ ಪಥಭ್ರಷ್ಟತೆಗಳಲ್ಲೂ ನಿಷಿದ್ಧ ಸಂಪಾದನೆಗಳಲ್ಲೂ ಸಹಭಾಗಿಯಾಗಿ ಹೇಗಿರಲಿ?) ನಾನು ನಿಮ್ಮನ್ನು ಯಾವುದರಿಂದ ತಡೆಯುತ್ತಿರುವೆನೋ ಅದನ್ನು ನಾನೇ ಮಾಡಲು ಎಷ್ಟು ಮಾತ್ರಕ್ಕೂ ಇಚ್ಛಿಸುವುದಿಲ್ಲ. ನಾನು ನನ್ನಿಂದ ಸಾಧ್ಯವಾಗು ವಷ್ಟು ಸುಧಾರಣೆ ಮಾಡಲಿಚ್ಛಿಸುತ್ತೇನೆ. ನಾನು ಮಾಡುವುದೆಲ್ಲವೂ ಅಲ್ಲಾಹನ ದಿವ್ಯಾನುಗ್ರಹದ ಮೇಲೆ ಆಧಾರಿತವಾಗಿದೆ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದ್ದೇನೆ ಮತ್ತು ಪ್ರತಿಯೊಂದು ವಿಷಯದಲ್ಲೂ ಅವನತ್ತಲೇ ವಾಲುತ್ತೇನೆ.

قَالَ يٰقَوْمِ اَرَءَيْتُمْ اِنْ كُنْتُ عَلٰى بَيِّنَةٍ مِّنْ رَّبِّيْ وَرَزَقَنِيْ مِنْهُ رِزْقًا حَسَنًا ؕ وَمَآ اُرِيْدُ اَنْ اُخَالِفَكُمْ اِلٰى مَآ اَنْهٰىكُمْ عَنْهُ ؕ اِنْ اُرِيْدُ اِلَّا الْاِصْلَاحَ مَا اسْتَطَعْتُ ؕ وَمَا تَوْفِيْقِيْٓ اِلَّا بِاللّٰهِ ؕ عَلَيْهِ تَوَكَّلْتُ وَاِلَيْهِ اُنِيْبُ ﴿۸۸﴾

89. ಓ ನನ್ನ ಜನಾಂಗ ಬಾಂಧವರೇ, ನನ್ನ ವಿರುದ್ಧವಿರುವ ನಿಮ್ಮ ಹಟಸಾಧನೆಯು ಕೊನೆಗೆ ನಿಮ್ಮ ಮೇಲೂ ನೂಹರ ಅಥವಾ ಹೂದರ ಅಥವಾ ಸಾಲಿಹರ ಜನಾಂಗದವರ ಮೇಲೆ ತಂದಂತಹ ಯಾತನೆಯನ್ನು ತರಲು ಕಾರಣವಾಗದಿರಲಿ. ಲೂತರ ಜನಾಂಗ ದವರಂತೂ ನಿಮಗಿಂತ ಹೆಚ್ಚೇನೂ ದೂರವಿಲ್ಲ.

وَيٰقَوْمِ لَا يَجْرِمَنَّكُمْ شِقَاقِيْٓ اَنْ يُّصِيْبَكُمْ مِّثْلُ مَآ اَصَابَ قَوْمَ نُوْحٍ اَوْ قَوْمَ هُوْدٍ اَوْ قَوْمَ صٰلِحٍ ؕ وَمَا قَوْمُ لُوْطٍ مِّنْكُمْ بِبَعِيْدٍ ﴿۸۹﴾

29. ಅರ್ಥಾತ್- ನನ್ನ ಪ್ರಭು ನನಗೆ ಸತ್ಯವನ್ನರಿಯುವ ದೃಷ್ಟಿಯನ್ನು ಹಾಗೂ ಧರ್ಮಸಮ್ಮತವಾದ ಜೀವನಾಧಾರಗಳನ್ನು ಕರುಣಿಸಿರುವಾಗ ನನ್ನ ಪಾಲಿಗೆ ಇದು ಧರ್ಮಸಮ್ಮತವಾಗುವುದು ಹೇಗೆ? ದೇವನು ನನಗೆ ದಯಪಾಲಿಸಿರುವ ಅನುಗ್ರಹಕ್ಕೆ ಪ್ರತಿಯಾಗಿ ನಾನು ನಿಮ್ಮ ಪಥಭ್ರಷ್ಟತೆ ಮತ್ತು ನಿಷಿದ್ಧ ಸಂಪಾದನೆಗಳನ್ನು ಸತ್ಯ ಮತ್ತು ಧರ್ಮಸಮ್ಮತವೆಂದು ಹೇಳಿ ಅವನಿಗೆ ಕೃತಘ್ನತೆ ತೋರುವುದಾದರೂ ಹೇಗೆ?

90. ನೀವು ನಿಮ್ಮ ಪ್ರಭುವಿನೊಡನೆ ಕ್ಷಮೆ ಬೇಡಿರಿ ಮತ್ತು ಅವನ ಕಡೆಗೆ ಮರಳಿರಿ. ನಿಶ್ಚಯವಾಗಿಯೂ ನನ್ನ ಪ್ರಭು ಕರುಣಾನಿಧಿಯೂ ತನ್ನ ಸೃಷ್ಟಿಯ ಮೇಲೆ ಪ್ರೇಮವುಳ್ಳವನೂ ಆಗಿರುತ್ತಾನೆ.

وَاسْتَغْفِرُوا رَبَّكُمْ ثُمَّ تُوبُوا إِلَيْهِ ۚ
إِنَّ رَبِّي رَحِيمٌ وَدُودٌ ﴿٩٠﴾

91. ಅವರು ಹೀಗೆ ಉತ್ತರಕೊಟ್ಟರು: "ಓ ಶುಐಬ್, ನಿನ್ನ ಅನೇಕ ಮಾತುಗಳು ನಮಗೆ ಅರ್ಥವೇ ಆಗುವುದಿಲ್ಲ. ನೀನು ನಮ್ಮೊಳಗೆ ಓರ್ವ ಬಲಹೀನನಾಗಿರುವುದನ್ನು ನಾವು ಕಾಣುತ್ತೇವೆ. ನಿನ್ನ ಪರಿವಾರವಿಲ್ಲದಿರುತ್ತಿದ್ದರೆ ನಾವೆಂದೋ ನಿನ್ನನ್ನು ಕಲ್ಲೆಸೆದು ಕೊಂದು ಹಾಕುತ್ತಿದ್ದೆವು. ನೀನು ನಮಗಿಂತ ಬಲಾಢ್ಯನೇನೂ ಅಲ್ಲ."

قَالُوا يَا شُعَيْبُ مَا نَفْقَهُ كَثِيرًا مِمَّا تَقُولُ
وَإِنَّا لَنَرَاكَ فِينَا ضَعِيفًا ۖ وَلَوْلَا رَهْطُكَ
لَرَجَمْنَاكَ ۖ وَمَا أَنْتَ عَلَيْنَا بِعَزِيزٍ ﴿٩١﴾

92. ಶುಐಬ್ ಹೇಳಿದರು: "ನೀವು (ನನ್ನ ಪರಿವಾರವನ್ನು ಭಯ ಪಟ್ಟು) ಅಲ್ಲಾಹನನ್ನು ಮರೆತು ಬಿಡಲು, ನಿಮ್ಮ ದೃಷ್ಟಿಯಲ್ಲಿ ನನ್ನ ಪರಿವಾರವು ಅಲ್ಲಾಹನಿಗಿಂತಲೂ ಅಧಿಕ ಪ್ರಬಲವಾದುದೇ? ನೀವು ಮಾಡುತ್ತಿರುವುದಾವುದೂ ಅಲ್ಲಾಹನ ಹಿಡಿತದಿಂದ ಹೊರಗಿಲ್ಲವೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ.

قَالَ يَا قَوْمِ أَرَهْطِي أَعَزُّ عَلَيْكُمْ مِنَ اللَّهِ
وَاتَّخَذْتُمُوهُ وَرَاءَكُمْ ظِهْرِيًّا ۖ إِنَّ
رَبِّي بِمَا تَعْمَلُونَ مُحِيطٌ ﴿٩٢﴾

93. ಓ ನನ್ನ ಜನಾಂಗ ಬಾಂಧವರೇ, ನೀವು ನಿಮ್ಮ ಕ್ರಮದಂತೆ ಕಾರ್ಯವೆಸಗುತ್ತ ಸಾಗಿರಿ, ನಾನು ನನ್ನ ಕ್ರಮದಂತೆ ಕಾರ್ಯವೆಸ ಗುತ್ತಿರುವೆನು. ಯಾರ ಮೇಲೆ ಅಪಮಾನಕರ ಯಾತನೆ ಬರುತ್ತದೆ ಮತ್ತು ಯಾರು ಸುಳ್ಳುಗಾರರು ಎಂಬುದು ನಿಮಗೆ ಶೀಘ್ರವೇ ತಿಳಿದು ಬರುವುದು. ನೀವೂ ಅದನ್ನು ನಿರೀಕ್ಷಿಸುತ್ತಲಿರಿ. ನಾನೂ ನಿಮ್ಮೊಂದಿಗೆ ನಿರೀಕ್ಷಿಸುತ್ತಿರುತ್ತೇನೆ.

وَيَا قَوْمِ اعْمَلُوا عَلَىٰ مَكَانَتِكُمْ إِنِّي عَامِلٌ ۖ
سَوْفَ تَعْلَمُونَ مَنْ يَأْتِيهِ عَذَابٌ
يُخْزِيهِ وَمَنْ هُوَ كَاذِبٌ ۖ وَارْتَقِبُوا
إِنِّي مَعَكُمْ رَقِيبٌ ﴿٩٣﴾

94. ಕೊನೆಗೆ ನಮ್ಮ ತೀರ್ಮಾನದ ಸಮಯ ಬಂದಾಗ ನಾವು ನಮ್ಮ ಕೃಪೆಯಿಂದ ಶುಐಬ್ ಮತ್ತು ಅವರ ಸತ್ಯವಿಶ್ವಾಸಿಗಳಾದ ಸಂಗ ಡಿಗರನ್ನು ರಕ್ಷಿಸಿದೆವು ಮತ್ತು ಅಕ್ರಮವೆಸಗಿದವರನ್ನು ಒಂದು ಭಯಾನಕ ಸ್ಫೋಟವು ಆಕ್ರಮಿಸಿತು.

وَلَمَّا جَاءَ أَمْرُنَا نَجَّيْنَا شُعَيْبًا وَالَّذِينَ
آمَنُوا مَعَهُ بِرَحْمَةٍ مِنَّا وَأَخَذَتِ
الَّذِينَ ظَلَمُوا الصَّيْحَةُ فَأَصْبَحُوا
فِي دِيَارِهِمْ جَاثِمِينَ ﴿٩٤﴾

95. ಆ ನಾಡಿನವರು ಅಲ್ಲಿ ನೆಲೆಸಿಯೇ ಇರಲಿಲ್ಲವೋ ಎಂಬಂತೆ ಅವರು ಕದಲದೆ ಬಿದ್ದಲ್ಲೇ ಬಿದ್ದು ಬಿಟ್ಟರು. ಕೇಳಿರಿ, ಸಮೂದ್ ಎಸೆಯಲ್ಪಟ್ಟಂತೆ ಮದ್‌ಯನಿನವರೂ ದೂರ ಎಸೆಯಲ್ಪಟ್ಟರು.

كَأَنْ لَمْ يَغْنَوْا فِيهَا ۗ أَلَا بُعْدًا لِمَدْيَنَ
كَمَا بَعِدَتْ ثَمُودُ ﴿٩٥﴾

96. ನಾವು ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೂ (ನೇಮಕದ) ಸುವ್ಯಕ್ತ ಆಧಾರದೊಂದಿಗೂ ಕಳುಹಿಸಿದೆವು-

وَلَقَدْ أَرْسَلْنَا مُوسَىٰ بِآيَاتِنَا
وَسُلْطَانٍ مُبِينٍ ﴿٩٦﴾

97. ಫಿರ್‌ಔನ್ ಮತ್ತು ಅವನ ರಾಜಮಾನ್ಯ ಸರದಾರರ ಕಡೆಗೆ- ಆದರೆ, ಆ ಜನರು ಫಿರ್‌ಔನನ ಆಜ್ಞೆಯನ್ನು ಅನುಸರಿಸಿದರು. ವಸ್ತುತಃ ಫಿರ್‌ಔನನ ಆಜ್ಞೆಯು ಸನ್ಮಾರ್ಗಪರವಾಗಿರಲಿಲ್ಲ.

إِلَىٰ فِرْعَوْنَ وَمَلَإِيْهِۦ فَٱتَّبَعُوٓا۟ أَمْرَ
فِرْعَوْنَ ۖ وَمَآ أَمْرُ فِرْعَوْنَ بِرَشِيدٍ ﴿٩٧﴾

98. ಪುನರುತ್ಥಾನ ದಿನದಂದು ಅವನು ತನ್ನ ಜನಾಂಗದ ಮುಂದೆ ನಿಂತು ಅವರನ್ನು ತನ್ನ ನೇತೃತ್ವದಲ್ಲಿ ನರಕದ ಕಡೆಗೆ ಒಯ್ಯುವನು. ಅವರು ತಲಪುವ ಸ್ಥಾನ ಅದೆಷ್ಟು ನಿಕೃಷ್ಟ!

يَقْدُمُ قَوْمَهُۥ يَوْمَ ٱلْقِيَٰمَةِ فَأَوْرَدَهُمُ
ٱلنَّارَ ۖ وَبِئْسَ ٱلْوِرْدُ ٱلْمَوْرُودُ ﴿٩٨﴾

99. ಅವರ ಮೇಲೆ ಇಹಲೋಕದಲ್ಲೂ ಶಾಪಬಿದ್ದಿತು ಮತ್ತು ಪುನರುತ್ಥಾನದಂದೂ ಬೀಳುವುದು. ಅವರಿಗೆ ಸಿಗುವ ಪ್ರತಿಫಲ ಎಷ್ಟು ನಿಕೃಷ್ಟ!

وَأُتْبِعُوا۟ فِى هَٰذِهِۦ لَعْنَةً وَيَوْمَ ٱلْقِيَٰمَةِ ۚ
بِئْسَ ٱلرِّفْدُ ٱلْمَرْفُودُ ﴿٩٩﴾

100. ನಾವು ನಿಮಗೆ ತಿಳಿಯ ಹೇಳುವ ಕೆಲವು ನಾಡುಗಳ ವೃತ್ತಾಂತಗಳಿವು. ಇವುಗಳಲ್ಲಿ ಕೆಲವು ಈಗಲೂ ನೆಲೆ ನಿಂತಿವೆ. ಇನ್ನು ಕೆಲವು ನಿರ್ಮೂಲನಗೊಂಡಿವೆ.

ذَٰلِكَ مِنْ أَنۢبَآءِ ٱلْقُرَىٰ نَقُصُّهُۥ عَلَيْكَ
مِنْهَا قَآئِمٌ وَحَصِيدٌ ﴿١٠٠﴾

101. ನಾವು ಅವರ ಮೇಲೆ ಅಕ್ರಮವೆಸಗಲಿಲ್ಲ. ಅವರು ತಾವೇ ತಮ್ಮ ಮೇಲೆ ಅಕ್ರಮವೆಸಗಿ ಕೊಂಡರು. ನಿಮ್ಮ ಪ್ರಭುವಿನ ಆಜ್ಞೆ ಬಂದಾಗ ಅವರು ಅಲ್ಲಾಹನನ್ನು ಬಿಟ್ಟು ಕೂಗಿ ಕರೆಯುತ್ತಿದ್ದ ಆರಾಧ್ಯರಾರೂ ಅವರಿಗೆ ಪ್ರಯೋಜನಕ್ಕೆ ಬಾರದಾದರು ಮತ್ತು ಅವರಿಗೆ ವಿನಾಶವನ್ನು ಹೊರತು ಇನ್ನೇನನ್ನೂ ಅವರು ಹೆಚ್ಚಿಸಲಿಲ್ಲ.

وَمَا ظَلَمْنَٰهُمْ وَلَٰكِن ظَلَمُوٓا۟ أَنفُسَهُمْ ۖ
فَمَآ أَغْنَتْ عَنْهُمْ ءَالِهَتُهُمُ ٱلَّتِى يَدْعُونَ
مِن دُونِ ٱللَّهِ مِن شَىْءٍ لَّمَّا جَآءَ أَمْرُ
رَبِّكَ ۖ وَمَا زَادُوهُمْ غَيْرَ تَتْبِيبٍ ﴿١٠١﴾

102. ನಿಮ್ಮ ಪ್ರಭು ಯಾವುದಾದರೂ ಅಕ್ರಮಿ ನಾಡನ್ನು ಹಿಡಿಯುವಾಗ ಅವನ ಹಿಡಿತ ಹೀಗೆಯೇ ಇರುತ್ತದೆ. ವಾಸ್ತವದಲ್ಲಿ ಅವನ ಹಿಡಿತವು ಬಹಳ ಬಿಗಿಯೂ ವೇದನಾಯುಕ್ತವೂ ಆಗಿರುತ್ತದೆ.

وَكَذَٰلِكَ أَخْذُ رَبِّكَ إِذَآ أَخَذَ ٱلْقُرَىٰ
وَهِىَ ظَٰلِمَةٌ ۚ إِنَّ أَخْذَهُۥٓ أَلِيمٌ شَدِيدٌ ﴿١٠٢﴾

103. ವಾಸ್ತವದಲ್ಲಿ ಪರಲೋಕಯಾತನೆಯ ಭಯ ಹೊಂದಿದ ಪ್ರತಿಯೊಬ್ಬನಿಗೂ ಇದರಲ್ಲೊಂದು ನಿದರ್ಶನವಿದೆ. ಅದು ಸಕಲ ಜನರೂ ಒಟ್ಟುಗೂಡುವ ಒಂದು ದಿನವಾಗಿರುವುದು. ಸಂಭವಿಸುವುದೆಲ್ಲವೂ ಎಲ್ಲರ ಕಣ್ಣ ಮುಂದೆಯೇ ಸಂಭವಿಸುವ ದಿನವದು.

إِنَّ فِى ذَٰلِكَ لَءَايَةً لِّمَنْ خَافَ عَذَابَ
ٱلْءَاخِرَةِ ۚ ذَٰلِكَ يَوْمٌ مَّجْمُوعٌ لَّهُ ٱلنَّاسُ
وَذَٰلِكَ يَوْمٌ مَّشْهُودٌ ﴿١٠٣﴾

104. ನಾವು ಅದನ್ನು ತರಲು ಹೆಚ್ಚೇನೂ ವಿಳಂಬ ಮಾಡುತ್ತಿಲ್ಲ. ಕೇವಲ ಸ್ವಲ್ಪವೇ ಕಾಲಾವಧಿಯು ಅದಕ್ಕೆ ನಿಶ್ಚಯವಾಗಿದೆ.

وَمَا نُؤَخِّرُهُۥٓ إِلَّا لِأَجَلٍ مَّعْدُودٍ ﴿١٠٤﴾

105. ಅದು ಬಂದಾಗ ಆತನ ಅನುಮತಿಯಿಂದ ಏನಾದರೂ ಹೇಳುವ ಹೊರತು ಯಾರೊಬ್ಬನಿಗೂ ಮಾತೆತ್ತುವ ಸಾಮರ್ಥ್ಯವಿರದು. ಅಂದು ಅವರಲ್ಲಿ ಕೆಲವರು ದುರ್ದೈವಿಗಳೂ ಇನ್ನು ಕೆಲವರು ಸುದೈವಿಗಳೂ ಆಗುವರು.

يَوْمَ يَأْتِ لَا تَكَلَّمُ نَفْسٌ إِلَّا بِإِذْنِهِ ۚ فَمِنْهُمْ شَقِيٌّ وَسَعِيدٌ ﴿١٠٥﴾

106. ದುರ್ದೈವಿಗಳಾಗುವವರು ನರಕಕ್ಕೆ ಹೋಗುವರು. (ಅಲ್ಲಿ ಉಷ್ಣ ಹಾಗೂ ತೃಷಾಧಿಕ್ಯದಿಂದ) ಮೇಲುಸಿರೆತ್ತುತ್ತಲೂ ಬುಸುಗುಟ್ಟು ತ್ತಲೂ ಇರುವರು.

فَأَمَّا الَّذِينَ شَقُوا فَفِي النَّارِ لَهُمْ فِيهَا زَفِيرٌ وَشَهِيقٌ ﴿١٠٦﴾

107. ನಿಮ್ಮ ಪ್ರಭು ಬೇರೇನನ್ನಾದರೂ ಇಚ್ಛಿಸುವ ಹೊರತು ಆಕಾಶಗಳೂ ಭೂಮಿಯೂ ನೆಲೆ ನಿಂತಿರುವ ವರೆಗೂ ಅವರು ಅದೇ ಸ್ಥಿತಿಯಲ್ಲಿ ಇರುವರು.[30] ನಿಶ್ಚಯವಾಗಿಯೂ ನಿಮ್ಮ ಪ್ರಭು ತನ್ನಿಚ್ಛೆಯಂತೆ ಮಾಡುವ ಸಾಮರ್ಥ್ಯವುಳ್ಳವನಾಗಿರುತ್ತಾನೆ.

خَالِدِينَ فِيهَا مَا دَامَتِ السَّمَاوَاتُ وَالْأَرْضُ إِلَّا مَا شَاءَ رَبُّكَ ۚ إِنَّ رَبَّكَ فَعَّالٌ لِمَا يُرِيدُ ﴿١٠٧﴾

108. ಇನ್ನು ಸುದೈವಿಗಳ ವಿಚಾರ-ಅವರು ಸ್ವರ್ಗಕ್ಕೆ ಹೋಗುವರು. ನಿಮ್ಮ ಪ್ರಭು ಬೇರೇನನ್ನಾದರೂ ಇಚ್ಛಿಸುವ ಹೊರತು ಅವರು ಆಕಾಶಗಳೂ ಭೂಮಿಯೂ ನೆಲೆನಿಂತಿರುವ ವರೆಗೂ ಅಲ್ಲೇ ಸದಾ ವಾಸಿಸುತ್ತಿರುವರು. ಎಂದೂ ಕೊನೆಗೊಳ್ಳದ ನಿರಂತರ ಕೊಡುಗೆಗಳು ಅವರಿಗೆ ಸಿಗುವುವು.

وَأَمَّا الَّذِينَ سُعِدُوا فَفِي الْجَنَّةِ خَالِدِينَ فِيهَا مَا دَامَتِ السَّمَاوَاتُ وَالْأَرْضُ إِلَّا مَا شَاءَ رَبُّكَ ۖ عَطَاءً غَيْرَ مَجْذُوذٍ ﴿١٠٨﴾

109. ಆದುದರಿಂದ ಓ ಪೈಗಂಬರರೇ, ಇವರು ಆರಾಧನೆ ಮಾಡುತ್ತಿರುವ ವುಗಳ ಬಗ್ಗೆ ನೀವೆಂದೂ ಸಂದೇಹಕ್ಕೊಳಗಾಗಬೇಡಿರಿ. ಇವರಂತು ಈ ಮುಂಚೆ ಇವರ ಪೂರ್ವಿಕರು ಪೂಜಿಸಿಕೊಂಡು ಬಂದಂತೆ ತಾವೂ ಪೂಜಿಸುತ್ತಲಿದ್ದಾರೆ ಮತ್ತು ನಾವು ಅವರಿಗೆ ಕೊಂಚವೂ ಲೋಪಮಾಡದೆ ಅವರ ಪಾಲನ್ನು ಸಂಪೂರ್ಣವಾಗಿ ಕೊಡುವೆವು.

فَلَا تَكُ فِي مِرْيَةٍ مِمَّا يَعْبُدُ هَٰؤُلَاءِ ۚ مَا يَعْبُدُونَ إِلَّا كَمَا يَعْبُدُ آبَاؤُهُمْ مِنْ قَبْلُ ۚ وَإِنَّا لَمُوَفُّوهُمْ نَصِيبَهُمْ غَيْرَ مَنْقُوصٍ ﴿١٠٩﴾

110. ನಾವು ಇದಕ್ಕಿಂತ ಮುಂಚೆ ಮೂಸಾರಿಗೆ ಗ್ರಂಥ ದಯಪಾಲಿಸಿದ್ದೆವು. (ಈಗ ನಿಮಗೆ ನೀಡಲಾಗಿರುವ ಈ ಗ್ರಂಥದ ಬಗೆಗೆ ಭಿನ್ನಾಭಿಪ್ರಾಯ ತಾಳುತ್ತಿರುವಂತೆಯೇ) ಅದರ ಬಗೆಗೂ ಭಿನ್ನಾಭಿಪ್ರಾಯ ತಾಳಲಾ ಗಿತ್ತು. ನಿಮ್ಮ ಪ್ರಭುವಿನ ಕಡೆಯಿಂದ ಒಂದು ವಿಷಯವು ಮೊದಲೇ ನಿರ್ಧರಿಸಲ್ಪಡದಿರುತ್ತಿದ್ದರೆ ಆ ಭಿನ್ನಾಭಿಪ್ರಾಯ ತಾಳುವವರ ನಡುವೆ ಎಂದೋ ತೀರ್ಮಾನ ಮಾಡಿಬಿಡಲಾಗುತ್ತಿತ್ತು. ಈ ವಸ್ತುಸ್ಥಿತಿಯಿಂದಾಗಿಯೇ ಅವರು ಈ ಬಗ್ಗೆ ಸಂಶಯ ಗ್ರಸ್ತರಾಗಿರುತ್ತಾರೆ.

وَلَقَدْ آتَيْنَا مُوسَى الْكِتَابَ فَاخْتُلِفَ فِيهِ ۚ وَلَوْلَا كَلِمَةٌ سَبَقَتْ مِنْ رَبِّكَ لَقُضِيَ بَيْنَهُمْ ۚ وَإِنَّهُمْ لَفِي شَكٍّ مِنْهُ مُرِيبٍ ﴿١١٠﴾

30. ಶಾಶ್ವತವಾಗಿ ಎಂಬ ಅರ್ಥದಲ್ಲಿ ಈ ಪದಗಳನ್ನು ಇಲ್ಲಿ ನುಡಿಗಟ್ಟಿನ ರೂಪದಲ್ಲಿ ಪ್ರಯೋಗಿಸಲಾಗಿದೆ.

111. ನಿಮ್ಮ ಪ್ರಭು ಅವರಿಗೆ ಅವರ ಕರ್ಮಗಳ ಸಂಪೂರ್ಣ ಪ್ರತಿಫಲ ಕೊಟ್ಟೇ ತೀರುವನೆಂಬುದೂ ಪರಮಾರ್ಥ. ನಿಶ್ಚಯವಾಗಿಯೂ ಅವನು ಅವರ ಸಕಲ ಕರ್ಮಗಳನ್ನು ಬಲ್ಲವನು.

وَإِنَّ كُلًّا لَّمَّا لَيُوَفِّيَنَّهُمْ رَبُّكَ أَعْمَالَهُمْ ۚ
إِنَّهُ بِمَا يَعْمَلُونَ خَبِيرٌ ﴿١١١﴾

112. ಆದುದರಿಂದ ಓ ಪೈಗಂಬರರೇ, ನೀವೂ (ಸತ್ಯನಿಷೇಧ ಮತ್ತು ಬಂಡಾಯ ನೀತಿಯನ್ನು ಬಿಟ್ಟು ಸತ್ಯವಿಶ್ವಾಸ ಮತ್ತು ಅನುಸರಣೆಯ ಕಡೆಗೆ ಬಂದಿರುವ) ನಿಮ್ಮ ಸಂಗಡಿಗರೂ ನಿಮಗೆ ಆಜ್ಞಾಪಿಸಿರುವ ಪ್ರಕಾರ ನೇರಮಾರ್ಗದಲ್ಲಿ ಸ್ಥಿರವಾಗಿ ನೆಲೆ ನಿಲ್ಲಿರಿ. ದಾಸ್ಯದ ಮೇರೆಯನ್ನು ಮೀರಬೇಡಿರಿ. ನಿಮ್ಮ ಪ್ರಭು ನೀವು ಮಾಡುತ್ತಿರುವುದನ್ನೆಲ್ಲ ವೀಕ್ಷಿಸುತ್ತಿದ್ದಾನೆ.

فَاسْتَقِمْ كَمَا أُمِرْتَ وَمَنْ تَابَ مَعَكَ
وَلَا تَطْغَوْا ۚ إِنَّهُ بِمَا تَعْمَلُونَ بَصِيرٌ ﴿١١٢﴾

113. ಆ ಅಕ್ರಮಿಗಳ ಕಡೆಗೆ ಕೊಂಚವೂ ವಾಲಬೇಡಿರಿ. ಅನ್ಯಥಾ ನರಕಾಗ್ನಿಯ ಸುಳಿಯಲ್ಲಿ ಸಿಕ್ಕಿ ಬಿಡುವಿರಿ. ನಿಮ್ಮನ್ನು ಅಲ್ಲಾಹನಿಂದ ರಕ್ಷಿಸತಕ್ಕ ರಕ್ಷಕ ಮಿತ್ರರಾರೂ ನಿಮಗೆ ಸಿಗಲಾರರು ಮತ್ತು ನಿಮಗೆ ಎಲ್ಲಿಂದಲೂ ಸಹಾಯವೂ ಒದಗದು.

وَلَا تَرْكَنُوا إِلَى الَّذِينَ ظَلَمُوا فَتَمَسَّكُمُ
النَّارُ وَمَا لَكُمْ مِنْ دُونِ اللَّهِ مِنْ
أَوْلِيَاءَ ثُمَّ لَا تُنْصَرُونَ ﴿١١٣﴾

114. ಹಗಲಿನ ಉಭಯ ಕೊನೆಗಳಲ್ಲೂ ರಾತ್ರಿ ಸ್ವಲ್ಪ ಕಳೆದ ಬಳಿಕವೂ[31] ನಮಾಝನ್ನು ಸಂಸ್ಥಾಪಿಸಿರಿ. ವಾಸ್ತವದಲ್ಲಿ ಪುಣ್ಯ ಕಾರ್ಯಗಳು ಪಾಪಕಾರ್ಯಗಳನ್ನು ದೂರೀಕರಿಸುತ್ತವೆ. ಇದು ಅಲ್ಲಾಹನನ್ನು ಸ್ಮರಿಸುವವರಿಗೊಂದು ಸ್ಮರಣೆಯಾಗಿರುತ್ತದೆ.

وَأَقِمِ الصَّلَاةَ طَرَفَيِ النَّهَارِ وَزُلَفًا
مِنَ اللَّيْلِ ۚ إِنَّ الْحَسَنَاتِ يُذْهِبْنَ
السَّيِّئَاتِ ۚ ذَٰلِكَ ذِكْرَىٰ لِلذَّاكِرِينَ ﴿١١٤﴾

115. ತಾಳ್ಮೆಯಿಂದಿರಿ. ಅಲ್ಲಾಹ್ ಸಜ್ಜನರ ಪ್ರತಿಫಲವನ್ನೆಂದೂ ವ್ಯರ್ಥಗೊಳಿಸುವುದಿಲ್ಲ.

وَاصْبِرْ فَإِنَّ اللَّهَ لَا يُضِيعُ أَجْرَ الْمُحْسِنِينَ ﴿١١٥﴾

116. ಜನರು ಈ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವುದನ್ನು ತಡೆಯುವಂತಹ ಒಂದು ಉತ್ತಮ ಜನ ವಿಭಾಗವು ನಿಮಗಿಂತ ಮುಂಚೆ ಗತಿಸಿಹೋದ ಜನಾಂಗಗಳಲ್ಲೇಕೆ ಉಂಟಾಗಲಿಲ್ಲ? ಇಂತಹವರು ಇದ್ದರೂ ನಾವು ಈ ಜನಾಂಗದಿಂದ ರಕ್ಷಿಸಿದಂತಹ ಕೆಲವೇ ಮಂದಿ ಇದ್ದರು. ಅನ್ಯಥಾ ಅಕ್ರಮಿಗಳು ಅವರಿಗೆ ಧಾರಾಳವಾಗಿ ಕೊಡಲ್ಪಟ್ಟಿದ್ದ ಸುಖ ಭೋಗಗಳನ್ನೇ ಹಿಂಬಾಲಿಸುತ್ತಿದ್ದರು. ಅವರು ಅಪರಾಧಿಗಳಾಗಿಬಿಟ್ಟರು.

فَلَوْلَا كَانَ مِنَ الْقُرُونِ مِنْ قَبْلِكُمْ
أُولُو بَقِيَّةٍ يَنْهَوْنَ عَنِ الْفَسَادِ فِي
الْأَرْضِ إِلَّا قَلِيلًا مِمَّنْ أَنْجَيْنَا مِنْهُمْ ۗ
وَاتَّبَعَ الَّذِينَ ظَلَمُوا مَا أُتْرِفُوا فِيهِ
وَكَانُوا مُجْرِمِينَ ﴿١١٦﴾

31. ಹಗಲಿನ ಕೊನೆಗಳೆಂದರೆ ಪ್ರಭಾತ ಮತ್ತು ಮುಸ್ಸಂಜೆ. ರಾತ್ರಿ ಕಳೆದ ನಂತರ ಎಂದರೆ ಇಶಾದ ಹೊತ್ತಾಗಿದೆ. (ನಮಾಝ್‌ನ ಸಮಯದ ವಿವರಣೆಗಾಗಿ ನೋಡಿರಿ- ಅಧ್ಯಾಯ ಬನೀಇಸ್ರಾಈಲ್ ಸೂಕ್ತ 78, ತಾಹಾ ಸೂಕ್ತ 130, ಅರ್ರೂಮ್ 17 ಮತ್ತು 18ನೆಯ ಸೂಕ್ತಗಳು.

117. ನಾಡುಗಳ ನಿವಾಸಿಗಳು ಸುಧಾರಕರಾಗಿರುವಾಗ ನಿಮ್ಮ ಪ್ರಭು ಆ ನಾಡುಗಳನ್ನು ಅನ್ಯಾಯವಾಗಿ ನಾಶಗೊಳಿಸುವವನಲ್ಲ.

وَمَا كَانَ رَبُّكَ لِيُهْلِكَ الْقُرٰى بِظُلْمٍ وَّ اَهْلُهَا مُصْلِحُوْنَ ﴿١١٧﴾

118. ನಿಶ್ಚಯವಾಗಿಯೂ ನಿಮ್ಮ ಪ್ರಭು ಇಚ್ಛಿಸುತ್ತಿದ್ದರೆ ಸಕಲ ಮಾನವರನ್ನು ಒಂದೇ ಸಮುದಾಯವನ್ನಾಗಿ ಮಾಡುತ್ತಿದ್ದನು. ಆದರೆ ಅವರಿನ್ನು ಭಿನ್ನಮತಿಗಳಾಗಿಯೇ ಮುಂದುವರಿಯುವರು.

وَلَوْ شَآءَ رَبُّكَ لَجَعَلَ النَّاسَ اُمَّةً وَّاحِدَةً وَّلَا يَزَالُوْنَ مُخْتَلِفِيْنَ ﴿١١٨﴾

119. ನಿಮ್ಮ ಪ್ರಭುವಿನ ಕೃಪೆಯಿದ್ದವರು ಮಾತ್ರ ಭಿನ್ನತೆಯಿಂದ ಪಾರಾಗುವರು. ಇದಕ್ಕಾಗಿಯೇ (ಈ ಆಯ್ಕೆಯ ಸ್ವಾತಂತ್ರ್ಯ ಪರೀಕ್ಷೆಗಾಗಿಯೇ) ಅವನು ಅವರನ್ನು ಸೃಷ್ಟಿಸಿರುವನು. ನಾನು ಯಕ್ಷರು ಮತ್ತು ಮನುಷ್ಯರಿಂದಲೂ ಎಲ್ಲರಿಂದಲೂ ನರಕವನ್ನು ತುಂಬಿಸುವೆನೆಂದು ನಿಮ್ಮ ಪ್ರಭು ಹೇಳಿದ್ದ ಮಾತು ಪೂರ್ಣಗೊಂಡಿತು.

اِلَّا مَنْ رَّحِمَ رَبُّكَ ؕ وَلِذٰلِكَ خَلَقَهُمْ ؕ وَتَمَّتْ كَلِمَةُ رَبِّكَ لَاَمْلَئَنَّ جَهَنَّمَ مِنَ الْجِنَّةِ وَالنَّاسِ اَجْمَعِيْنَ ﴿١١٩﴾

120. ಓ ಪೈಗಂಬರರೇ, ನಿಮಗೆ ಹೇಳಲಾಗುವ ಸಂದೇಶವಾಹಕರ ವೃತ್ತಾಂತಗಳಿವು. ನಾವು ಇವುಗಳ ಮೂಲಕ ನಿಮ್ಮ ಮನಸ್ಸನ್ನು ಬಲಪಡಿಸುತ್ತೇವೆ. ಇವುಗಳಿಂದ ನಿಮಗೆ ಪರಮಾರ್ಥಜ್ಞಾನ ಲಭಿಸಿತು. ಸತ್ಯವಿಶ್ವಾಸಿಗಳಿಗೆ ಉಪದೇಶ ಹಾಗೂ ಜಾಗೃತಿ ಲಭಿಸಿದುವು.

وَكُلًّا نَّقُصُّ عَلَيْكَ مِنْ اَنْۢبَآءِ الرُّسُلِ مَا نُثَبِّتُ بِهٖ فُؤَادَكَ ۚ وَجَآءَكَ فِيْ هٰذِهِ الْحَقُّ وَمَوْعِظَةٌ وَّذِكْرٰى لِلْمُؤْمِنِيْنَ ﴿١٢٠﴾

121. ಸತ್ಯವಿಶ್ವಾಸವನ್ನು ಸ್ವೀಕರಿಸದವರೊಡನೆ ಹೇಳಿರಿ - ನೀವು ನಿಮ್ಮ ಕ್ರಮದಂತೆ ಕಾರ್ಯವೆಸಗಿರಿ ಮತ್ತು ನಾವು ನಮ್ಮ ಕ್ರಮದಂತೆ ಕಾರ್ಯವೆಸಗುತ್ತೇವೆ.

وَقُلْ لِّلَّذِيْنَ لَا يُؤْمِنُوْنَ اعْمَلُوْا عَلٰى مَكَانَتِكُمْ ؕ اِنَّا عٰمِلُوْنَ ﴿١٢١﴾

122. ಕರ್ಮಫಲವನ್ನು ನೀವೂ ನಿರೀಕ್ಷಿಸಿರಿ ನಾವೂ ನಿರೀಕ್ಷಿಸುತ್ತೇವೆ.

وَانْتَظِرُوْا ۚ اِنَّا مُنْتَظِرُوْنَ ﴿١٢٢﴾

123. ಆಕಾಶಗಳಲ್ಲೂ ಭೂಮಿಯಲ್ಲೂ ಅಡಗಿರುವುದೆಲ್ಲವೂ ಅಲ್ಲಾಹನ ಅಧೀನದಲ್ಲಿವೆ. ಸಕಲ ವ್ಯವಹಾರಗಳೂ ಆತನ ಕಡೆಗೇ ಮರಳಿಸಲ್ಪಡುತ್ತವೆ. ಆದುದರಿಂದ ಓ ಪೈಗಂಬರರೇ, ನೀವು ಅವನ ದಾಸ್ಯ-ಆರಾಧನೆ ಮಾಡಿರಿ. ಅವನ ಮೇಲೆಯೇ ಭರವಸೆಯನ್ನಿಡಿರಿ. ನೀವು ಮಾಡುತ್ತಿರುವುದರ ಬಗ್ಗೆ ಅಲ್ಲಾಹನು ಅಶ್ರದ್ಧನಲ್ಲ.

وَلِلّٰهِ غَيْبُ السَّمٰوٰتِ وَالْاَرْضِ وَاِلَيْهِ يُرْجَعُ الْاَمْرُ كُلُّهٗ فَاعْبُدْهُ وَتَوَكَّلْ عَلَيْهِ ؕ وَمَا رَبُّكَ بِغَافِلٍ عَمَّا تَعْمَلُوْنَ ﴿١٢٣﴾